| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 10 ನಿ | ಗಣಿತ<br>ಸಂಕಲನ | * ಕೂಡುವ ಚಿಹ್ನೆ '+' ಮತ್ತು ಸಮ ಚಿಹ್ನೆ '=' ಪರಿಚಯ, ಬಳಕೆ ಮತ್ತು ಅಭ್ಯಾಸ | ಕಪ್ಪು ಹಲಗೆ | ಶಿಕ್ಷಕ | ಶಿಕ್ಷಕರು ಕಪ್ಪು ಹಲಗೆಯ ಮೇಲೆ ಕೆಲವು ಸಂಕಲನದ ವಾಕ್ಯಗಳನ್ನು ಬರೆದು ಅವುಗಳನ್ನು ಸಂಖ್ಯೆ ಹಾಗೂ ಚಿಹ್ನೆ ಬಳಸಿ ಬರೆಯುವಂತೆ ಮಕ್ಕಳಿಗೆ ಸೂಚನೆ ನೀಡುವರು.<br>ಉದಾ : 3ಕ್ಕೆ 4ನ್ನು ಸೇರಿಸಿದರೆ 7ಕ್ಕೆ ಸಮ<br>ಮಕ್ಕಳು : 3 + 4 = 7 | ಗಣಿತ<br>ದಶಕ ಸಹಿತ ಮತ್ತು ದಶಕ ರಹಿತ ಸಂಕಲನ | * ಎರಡು ಸಂಖ್ಯೆಗಳ ಮತ್ತು ಮೂರು ಸಂಖ್ಯೆಗಳ ದಶಕ ರಹಿತ ಮತ್ತು ದಶಕ ಸಹಿತ ಸಂಕಲನ<br>* ನಿತ್ಯ ಜೀವನಕ್ಕೆ ಸಂಬಂಧಿಸಿದ ಸಂಕಲನದ ಸಮಸ್ಯೆಗಳನ್ನು ಬಿಡಿಸುವುದು. | ಸಂಕಲನದ ಲೆಕ್ಕಗಳು / ಸಮಸ್ಯೆ ಒಳಗೊಂಡ ಚೀಟಿಗಳು | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :**<br>ಮಕ್ಕಳನ್ನು ಚಿಕ್ಕ ಚಿಕ್ಕ ಗುಂಪುಗಳಲ್ಲಿ ಕೂರಿಸಿ, ಅವರೆದುರು ಸಂಕಲನ ಲೆಕ್ಕಗಳನ್ನು (ದಶಕ ಸಹಿತ, ದಶಕ ರಹಿತ, ಎರಡು ಸಂಖ್ಯೆಗಳ ಸಂಕಲನ, ಮೂರು ಸಂಖ್ಯೆಗಳ ಸಂಕಲನ, ನಿತ್ಯಜೀವನದ ಸಮಸ್ಯೆಗಳು) ಬರೆದ ಚೀಟಿಗಳನ್ನಿಟ್ಟು ಪ್ರತಿ ವಿದ್ಯಾರ್ಥಿ ಚೀಟಿ ಆಯ್ದು, ಪೆನ್ನು ಪುಸ್ತಕದ ಸಹಾಯದಿಂದ ಲೆಕ್ಕ ಬಿಡಿಸುವಂತೆ ಸೂಚನೆ ನೀಡುವರು. |
| | 20 ನಿ | | | | ಸ್ವ ಕಲಿಕೆ | ಮಕ್ಕಳು ತಮ್ಮ ಪುಸ್ತಕಗಳಲ್ಲಿ ಕಪ್ಪುಹಲಗೆಯ ಮೇಲಿರುವ ಸಂಕಲನದ ವಾಕ್ಯಗಳನ್ನು ಸಂಖ್ಯೆ ಮತ್ತು ಚಿಹ್ನೆ ಬಳಸಿ ಬರೆದುಕೊಂಡು ಲೆಕ್ಕ ಮಾಡುವರು. | | | | ಶಿಕ್ಷಕ | ಮಕ್ಕಳು ಮೌಲ್ಯಮಾಪನ ಚಟುವಟಿಕೆಯಲ್ಲಿ ತೊಡಗುವರು. ಪೆನ್ನು ಪುಸ್ತಕ ಬಳಸಿ ಲೆಕ್ಕಗಳನ್ನು ಬಿಡಿಸುವರು. |
| | 10 ನಿ | | | ಅಭ್ಯಾಸ ಪುಸ್ತಕ ಕಪ್ಪು ಹಲಗೆ | ಶಿಕ್ಷಕ | ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸಿದ ನಂತರ ಶಿಕ್ಷಕರು, ಅದೇ ಮಾದರಿಯಲ್ಲಿ ಗಣಿತ ವಾಕ್ಯಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಅವುಗಳನ್ನು ಸಂಖ್ಯೆ ಮತ್ತು ಚಿಹ್ನೆ ಬಳಸಿ, ಬರೆಯುವುದರ ಜೊತೆಗೆ, ಉತ್ತರಗಳನ್ನೂ ಕಂಡುಹಿಡಿಯುವಂತೆ ಸೂಚನೆ ನೀಡುವರು.<br>ಉದಾ : 7ಕ್ಕೆ 2ನ್ನು ಸೇರಿಸಿ,<br>ಮಕ್ಕಳು : 7 + 2 = 9 | | | ಸಂಕಲನದ ಲೆಕ್ಕಗಳು / ಸಮಸ್ಯೆ ಒಳಗೊಂಡ ಸೂಚನಾ ಫಲಕವುಳ್ಳ ಹಾವು–ಏಣಿ ಆಟದ ಬೋರ್ಡ್ | ಶಿಕ್ಷಕ | * ಮೊದಲೇ ತಯಾರಿಸಿದ ಹಾವು ಏಣಿ ಆಟದ ಬೋರ್ಡ್ ಬಳಸಿ, (ಅದರಲ್ಲಿ ಸಂಕಲನದ ವಿವಿಧ ಮಾದರಿಯ ಲೆಕ್ಕ / ಸಮಸ್ಯೆ ಒಳಗೊಂಡಿರುವಂತೆ) ಇಬ್ಬರು ಅಥವಾ ನಾಲ್ಕು ಮಕ್ಕಳನ್ನು ಕರೆದು, ಮೌಲ್ಯಮಾಪನದ ಆಟ ಆಡುವಂತೆ ಶಿಕ್ಷಕರು ಸೂಚನೆ ನೀಡುವರು. |
| | 30 ನಿ | | | | ಸ್ವಕಲಿಕೆ | ಮಕ್ಕಳು ಮೇಲೆ ಸೂಚಿಸಿರುವ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಪ್ರತಿ ಬಾರಿ, ಪ್ರತಿ ಗುಂಪಿನಲ್ಲಿ ಇಬ್ಬರು ಅಥವಾ ನಾಲ್ಕು ಜನ ವಿದ್ಯಾರ್ಥಿಗಳು ಸಂಕಲನದ, ಸಮಸ್ಯೆ ಒಳಗೊಂಡ ಹಾವು–ಏಣಿ ಆಟ ಆಡುವರು.<br>ಶಿಕ್ಷಕರು ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಪುಸ್ತಕಗಳನ್ನು ಪರಿಶೀಲಿಸಿ, ತಿದ್ದುವರು. | | | | ಶಿಕ್ಷಕ | ಉತ್ತಮವಾಗಿ ಮತ್ತು ವೇಗವಾಗಿ ಲೆಕ್ಕಗಳನ್ನು ಮಾಡಿ ಆಟದಲ್ಲಿ ಗೆದ್ದ ವಿದ್ಯಾರ್ಥಿಯನ್ನು ಅಭಿನಂದಿಸಿ ಚಪ್ಪಾಳೆಯ ಮೂಲಕ ಪ್ರೋತ್ಸಾಹ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | ಜೀವನ ವಿಜ್ಞಾನ ಭಜನೆ (ಭಕ್ತಿ) | * ಏಕಾಗ್ರತೆ ಹಾಗೂ ನಿರ್ಮಲ ಭಾವನೆಗಳನ್ನು ಬೆಳೆಸಿಕೊಳ್ಳುವರು. | ಭಜನೆ ಭಕ್ತಿಗೀತೆ | ಶಿಕ್ಷಕ | ಶಿಕ್ಷಕರು ಎರಡೂ ತರಗತಿಯ ಮಕ್ಕಳನ್ನು ಒಂದೇ ಕೊಠಡಿಯಲ್ಲಿ ಸೂಕ್ತ ಅಂತರಗಳಲ್ಲಿ ಕೂರಿಸಿ 2 ನಿಮಿಷ ಮೌನವಾಗಿ ಕುಳಿತುಕೊಳ್ಳುವಂತೆ ಸೂಚನೆ ನೀಡುವರು. | | | | | ಒಂದನೇಯ ತರಗತಿಯ ಮಕ್ಕಳೊಡನೆ ಸೇರಿ ಆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 50 ನಿ | | | | ಶಿಕ್ಷಕ | ನಂತರ ಶಿಕ್ಷಕರು ಸರಳವಾದ ಕೆಲವು ಭಜನೆಗಳನ್ನು ಹೇಳಿಕೊಟ್ಟು ಮಕ್ಕಳಿಗೆ ಪುನರುಚ್ಛರಿಸಲು ಹೇಳುವರು. ಮಕ್ಕಳು ಸರಳವಾದ ಭಜನೆ ಹಾಡುವರು. | | | | | |
| | 20 ನಿ | | | | ಶಿಕ್ಷಕ | ನಂತರ ಶಿಕ್ಷಕರು 10 ನಿಮಿಷ ಮತ್ತೊಮ್ಮೆ ಮೌನವಾಗಿ ಕಣ್ಣುಮುಚ್ಚಿ ಕುಳಿತುಕೊಳ್ಳುವಂತೆ ಸೂಚನೆ ನೀಡುವರು ನಂತರ ಶಿಕ್ಷಕರು 'ಅ' ಕಾರ 'ಉ' ಕಾರ ಮತ್ತು 'ಮ' ಕಾರಗಳ ಸಂಗಮವಾದ 'ಓಂ' ಕಾರವನು ಉಚ್ಚಾರ ಮಾಡುವ ಕ್ರಮವನ್ನು ತಿಳಿಸಿ ಅಭ್ಯಾಸ ಮಾಡಿಸುವರು. | | | | | |
| 4<br>ಪ.ಅ.<br>33 | 40 ನಿ | ಪರಿಸರ ಅಧ್ಯಯನ ದೇಹದ ಸ್ವಚ್ಛತೆ | * ದೇಹದ ಅಂಗಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಪ್ರಾಮುಖ್ಯತೆಯನ್ನು ತಿಳಿಸುವರು.<br>* ಸ್ವಚ್ಛತೆಯ ಅಭ್ಯಾಸಗಳನ್ನು ಬೆಳಸಿಕೊಳ್ಳುವರು | ಅಭಿನಯ ಗೀತೆ | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :**<br>ಶುಚಿಯಾಗಿರಬೇಕು ನೀನು<br>ಲಕ ಲಕ ಹೊಳೆಯುತಿರ..........<br>.......................................ಬೇಕು.<br>ಎಂಬ ಗೀತೆಯನ್ನು ಅಭಿನಯ ಪೂರ್ವಕವಾಗಿ ಹೇಳಿಕೊಡುವುದು.<br>ನಂತರ ಅಭಿನಯ ಗೀತೆಯಲ್ಲಿ ತಿಳಿಸಿರುವಂತೆ ನಾವು ಏಕೆ ಶುಚಿಯಾಗಿರಬೇಕು ?<br>ಮುಂತಾದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. | ಪರಿಸರ ಅಧ್ಯಯನ ಅಭ್ಯಾಸ ಆರೋಗ್ಯ | ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಸ್ವಚ್ಛತೆ, ಅವಶ್ಯಕತೆಯನ್ನು ಅರಿಯುವುದು. | | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :**<br>1ನೇ ತರಗತಿಯಲ್ಲಿನ ಚಟುವಟಿಕೆಯನ್ನು ಎರಡನೇ ತರಗತಿಯವರೆಗೂ ಮಾಡಿಸುವುದು. |
| | 35 ನಿ | | | | | ಎರಡನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | ಚಿತ್ರಪಟಗಳು | ಶಿಕ್ಷಕ | * ಎರಡನೇ ತರಗತಿಗೆ ಮುಂದುವರೆಯುತ್ತಾ ಮಕ್ಕಳಿಗೆ ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಅನುಸರಿಬಹುದಾದ ಅಂಶಗಳನ್ನು ಪಟ್ಟಿ ಮಾಡಿಸುವುದು.<br>* ದೇಹದ ಸ್ವಚ್ಛತೆ ಮಾಡಿಕೊಳ್ಳದ ಕೆಲವು ಚಿತ್ರಪಟಗಳನ್ನು ಮಕ್ಕಳಿಗೆ ನೀಡಿ ಅದರಲ್ಲಿರುವ ಅಂಶಗಳನ್ನು ಹೇಳಿಸುವುದು. |
| | 05 ನಿ | | | | | ಎರಡೂ ತರಗತಿಗಳ ಮಕ್ಕಳಿಗೆ ವೈಯಕ್ತಿಕ ಸ್ವಚ್ಛತೆ ಕಾಪಾಡುವ ಬಗ್ಗೆ ಗೃಹಪಾಠ ನೀಡುವುದು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN 55 | 05 ನಿ | ಕನ್ನಡ<br>ಪದ ಓದು ಅಕ್ಷರ ಕಲಿ : ಹಂತ – 4 (ಲ, ಷ, ಈ, ಊ, ಕ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸವುದು. (ಲ, ಷ, ಈ, ಊ, ಕ)<br>* ಅಚ್ಚಾದ ದಪ್ಪ ಅಕ್ಷರಗಳನ್ನು ಕಪ್ಪು ಹಲಗೆಯ ಮೇಲೆ ಹಾಗೂ ಮಿಂಚುಪಟ್ಟಿಗಳ ಮೇಲೆ ಬರೆದ ಬರಹ ಓದುವುದು. | ಪಠ್ಯ ಪುಸ್ತಕ<br>ಮಿಂಚು ಪಟ್ಟಿಗಳು<br>ನೋಟ್ ಪುಸ್ತಕ | ಶಿಕ್ಷಕ | ಗೃಹಪಾಠ ಪರಿಶೀಲಿಸುವರು. | ಕನ್ನಡ<br>ತಂಗಿಗೆ ನಾಮಕರಣ | * ಪರಿಚಿತ ಸನ್ನಿವೇಶ.......................................<br>* ಮಾರ್ಗದರ್ಶಿತ ಸರಳ.................................. | ಪಠ್ಯ ಪುಸ್ತಕ | ಶಿಕ್ಷಕ | ಗೃಹಪಾಠ ಪರಿಶೀಲಿಸುವರು.<br>ಮಕ್ಕಳಿಗೆ ಪಾಠವನ್ನು ನಕಲು ಮಾಡಲು ಸೂಚಿಸುವರು. |
| | 35 ನಿ | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ :**<br>* ಲ, ಷ, ಈ, ಊ, ಕ, ಈ ಅಕ್ಷರಗಳ ಮಿಂಚುಪಟ್ಟಿಗಳನ್ನು ಪ್ರತ್ಯೇಕವಾಗಿ ತೋರಿಸುತ್ತಾ ಮಕ್ಕಳು ಅಕ್ಷರಗಳನ್ನು ಗುರುತಿಸಲು ಸೂಚಿಸುವರು.<br>* ಪಠ್ಯಪುಸ್ತಕ ಪುಟ – 48ರ ಪದಗಳನ್ನು ಅಕ್ಷರಗಳನ್ನು ಹೇಳಿಸುತ್ತಾ ಓದಿಸುವರು.<br>* ಮೇಲಿನ ಅಕ್ಷರಗಳನ್ನು ಕಪ್ಪು ಹಲಗೆಯ ಮೇಲೆ ನಕಲು ಮಾಡಿಸುವರು. | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಪಠ್ಯ ಪುಸ್ತಕದ ಪುಟ –42, 43ರ ಅಕ್ಷರಗಳನ್ನು ಬರೆದು ಪೂರ್ಣಗೊಳಿಸಲು ಸೂಚಿಸುವರು. | | | | ಶಿಕ್ಷಕ | ಮಕ್ಕಳಿಂದ ಪಠ್ಯದಲ್ಲಿರುವ ಲಾಲಿಹಾಡನ್ನು ಗುಂಪಿನಲ್ಲಿ ಹಾಡಿಸುವರು.<br>* ಮಕ್ಕಳು ತಾವು ಕಲಿತಿರುವ ಸಂಪ್ರದಾಯದ ಅಥವಾ ಪರಿಸರದಲ್ಲಿನ ಹಾಡುಗಳನ್ನು ಹಾಡಿಸುವುದು.<br>* ಮಕ್ಕಳು ತಮ್ಮ ಮನೆಯಲ್ಲಿ ಆಚರಿಸಲಾದ ಹಬ್ಬ / ನಾಮಕರಣ / ಮದುವೆ/ ಮೊದಲಾದ ಸಂದರ್ಭಗಳ ಬಗ್ಗೆ ತಿಳಿದುಕೊಂಡು ಆ ಸನ್ನಿವೇಶ ಕುರಿತಂತೆ ನಾಲ್ಕಾರು ವಾಕ್ಯ ಹೇಳಿಸುವುದು.<br>(ಪರಸ್ಪರ ಮಕ್ಕಳ ಸಂಭಾಷಣೆ) |
| | 35 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br>ಲ, ಷ, ಈ, ಊ, ಕ, ಅಕ್ಷರಗಳನ್ನು ನೋಟ್ ಪುಸ್ತಕದಲ್ಲಿ ನಕಲು ಮಾಡಿಕೊಂಡು ಬರುವಂತೆ ತಿಳಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2** | 20 ನಿ | ಗಣಿತ<br>ಸಂಕಲನ (ದಶಕ ರಹಿತ) | * ಮೊತ್ತ 9ಕ್ಕೆ ಮೀರದಂತೆ "+" ಮತ್ತು "=" ಚಿಹ್ನೆ ಬಳಸಿ ಸಂಕಲನ ಮಾಡುವುದು. | | | **ಅಭ್ಯಾಸ ಮತ್ತು ಬಳಕೆಯ ಚಟುವಟಿಕೆ ಪುನರ್ಬಲನ ಚಟುವಟಿಕೆ :**<br>[ಎರಡನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ತೊಡಗುವರು] | ಗಣಿತ<br>ವ್ಯವಕಲನ (ದಶಕ ರಹಿತ ಮತ್ತು ದಶಕ ಸಹಿತ) | * ಎರಡು ಸಂಖ್ಯೆಗಳ ದಶಕರಹಿತ ವ್ಯವಕಲನ * ಎರಡು ಸಂಖ್ಯೆಗಳ ದಶಕ ಸಹಿತ ವ್ಯವಕಲನ<br>* ನಿತ್ಯ ಜೀವನದಲ್ಲಿ ವ್ಯವಕಲನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸುವುದು. | ಅಭಿನಯ ಗೀತೆ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಶಿಕ್ಷಕರು ಎರಡೂ ತರಗತಿಯ ಮಕ್ಕಳನ್ನು ಒಟ್ಟಿಗೆ ವೃತ್ತಾಕಾರವಾಗಿ ನಿಲ್ಲಿಸಿಕೊಂಡು ವ್ಯವಕಲನಕ್ಕೆ ಸಂಬಂಧಿಸಿದ ಅಭಿನಯ ಗೀತೆ ಮಾಡಿಸುವುದು.<br>"ಹತ್ತು ಹಸಿರು ಸೀಸೆಗಳು ಅಟ್ಟದ ಮೇಲಿತ್ತು, ಒಂದು ಬಿದ್ದು ಒಡೆದು ಹೋಯ್ತು, ಒಂಭತ್ತಾಯಿತು........." |
| | 10 ನಿ | | | ಸಂಕಲನ (+), ಸಮ (=), ಇವುಗಳ "ಚಿಹ್ನೆ"ಗಳ ಮಿಂಚುಪಟ್ಟಿ | ಶಿಕ್ಷಕ | ಶಿಕ್ಷಕರು ಕಪ್ಪು ಹಲಗೆಯ ಮೇಲೆ ಕೆಲವು ಸಂಕಲನದ ಲೆಕ್ಕಗಳನ್ನು ಹಾಕಿ ಅವುಗಳನ್ನು ಬಿಡಿಸುವಂತೆ ಮಕ್ಕಳಿಗೆ ಸೂಚನೆ ನೀಡುವರು. | | | ಗೋಲಿಗಳು | ಹಿರೇಮಣಿ | ಎಲ್ಲಾ ವಿದ್ಯಾರ್ಥಿಗಳಿಗೂ 20 ಮಣಿ/ ಗೋಲಿಗಳನ್ನು ವಿತರಿಸಲು ಹಿರೇಮಣಿಗೆ ಸೂಚನೆ ನೀಡುವುದು.<br>ಹಿರೇಮಣಿ ವಸ್ತುಗಳನ್ನು ವಿತರಿಸುವನು. |
| | 40 ನಿ | | | | ಹಿರೇಮಣಿ | ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ ಸಂಕಲನದ ಲೆಕ್ಕಗಳನ್ನು ಬಿಡಿಸುವರು.<br>ಉದಾ : (1) $3 + 3 = 6$<br>(2) $2 + 7 = 9$ | | | ಸಣ್ಣ ಸಣ್ಣ ಕಲ್ಲುಗಳು, ಮಣಿಗಳು | ಶಿಕ್ಷಕ | **ಕಲಿಕಾಂಶ ಚಟುವಟಿಕೆ :**<br>ಶಿಕ್ಷಕರು ಕಲ್ಲು / ಮಣಿ / ಗೋಲಿಗಳನ್ನು ಬಳಸಿ, ವ್ಯವಕಲನ ಮಾಡುವ ವಿಧಾನವನ್ನು ಮಕ್ಕಳಿಗೆ ಪರಿಚಯಿಸುವರು ಮತ್ತು ಶಿಕ್ಷಕರು ಸಂಖ್ಯೆಗಳನ್ನು ಹೇಳಿದಂತೆ ಮಕ್ಕಳು 20 ಮಣಿಗಳಲ್ಲಿ ಹೇಳಿದ ಸಂಖ್ಯೆಯಷ್ಟು ಮಣಿ ತೆಗೆದು ಉಳಿದ ಮಣಿಗಳನ್ನು ಎಣಿಸಿ ಹೇಳುವ ಚಟುವಟಿಕೆಯನ್ನು ಮಾಡಿಸುವರು. ಮುಂದಿನ ಚಟುವಟಿಕೆಗೆ ಶಿಕ್ಷಕರು ಸೂಚನೆ ನೀಡುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಮಾಡಿರುವ ಲೆಕ್ಕಗಳನ್ನು ಪರಿಶೀಲಿಸಿ ತಿದ್ದುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಇರುವ ವಿದ್ಯಾರ್ಥಿಗಳ ಗುಂಪಿನಲ್ಲಿ ಅವನು ಹೇಳಿದಷ್ಟು ಜನ ಗುಂಪಿನಿಂದ ಹೊರ ಹೋಗಿ ಉಳಿದವರನ್ನು ಎಣಿಸಿ ಹೇಳುವ ಚಟುವಟಿಕೆ ಮಾಡಿಸುವುದು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **3**<br>**ಪ.ಅ.**<br>**34** | 80 ನಿ | **ಪರಿಸರ ಅಧ್ಯಯನ**<br>**ದೇಹದ ಸ್ವಚ್ಛತೆ** | * ದೇಹದ ಅಂಗಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಪ್ರಾಮುಖ್ಯತೆಯನ್ನು ತಿಳಿಯುವರು.<br>* ಸ್ವಚ್ಛತೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವರು. | ಸ್ವಚ್ಛತೆಯ ಬಗ್ಗೆ ಚಿತ್ರಪಟಗಳು<br><br>ದಿನನಿತ್ಯದ ಆರೋಗ್ಯಕರ ಅಭ್ಯಾಸದ ಚಿತ್ರಪಟಗಳು | ಶಿಕ್ಷಕ | **<u>ಕಲಿಕೆಯ ಚಟುವಟಿಕೆ :</u>**<br>* ವೈಯಕ್ತಿಕ ಸ್ವಚ್ಛತೆಗೆ ಸಂಬಂಧಿಸಿದಂತೆ ವಿವಿಧ ಚಾರ್ಟ್‌ಗಳನ್ನು ಬಳಸಿಕೊಂಡು ಅವುಗಳಲ್ಲಿನ ಸ್ವಚ್ಛತೆಯ ಅಭ್ಯಾಸಗಳನ್ನು ಪರಿಚಯಿಸುವುದು.<br>* ಮಕ್ಕಳ ಶುಚಿತ್ವಗಳನ್ನು ಪರಿಶೀಲಿಸುವುದು. ಜೊತೆಯಲ್ಲಿ ಅದರಲ್ಲಿನ ಕೊರತೆಗಳನ್ನು ಅವರಿಂದ ಹೇಳಿಸುವುದು.<br>* ದೈಹಿಕ ಸ್ವಚ್ಛತೆಯನ್ನು ಮಕ್ಕಳಲ್ಲಿರುವ ಲೋಪಗಳನ್ನು ಅವರೇ ಹೇಗೆ ಸರಿಪಡಿಸಿಕೊಳ್ಳಬೇಕು ಎಂಬುದನ್ನು ಮಕ್ಕಳಿಂದ ಹೇಳಿಸುವುದು. ಇದನ್ನು ಪ್ರತಿದಿನ ಅನುಸರಿಸಬೇಕೆಂಬುದನ್ನು ಮನವರಿಕೆ ಮಾಡಿಕೊಡುವುದು.<br>1) ಹಲ್ಲು ಉಜ್ಜುವುದು<br>2) ಸ್ನಾನ ಮಾಡುವುದು.<br>3) ಶುಭ್ರ ಉಡುಪನ್ನು ಧರಿಸುವುದು. ಆಗಾಗ ಉಗುರು ಕತ್ತರಿಸಿಕೊಳ್ಳುವುದು. ಇತ್ಯಾದಿ.<br>* ಮೇಲಿನ ಅಭ್ಯಾಸಗಳನ್ನು ಯಾವ ಯಾವ ಸಮಯದಲ್ಲಿ ಹೇಗೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಮಕ್ಕಳಿಂದ ಮನದಟ್ಟು ಮಾಡಿಸುವುದು.<br>* ಈ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಹೆಚ್ಚಿನ ಅಂಶಗಳನ್ನು ಮನದಟ್ಟು ಮಾಡಿಸುವುದು. | **ಪರಿಸರ ಅಧ್ಯಯನ**<br>**ಅಭ್ಯಾಸ ಆರೋಗ್ಯ** | ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಸ್ವಚ್ಛತೆ ಅವಶ್ಯಕತೆಯನ್ನು ಅರಿಯುವರು. | | | 1ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಗಳಲ್ಲಿ ಭಾಗವಹಿಸುವರು.<br><br>**ವಿಶೇಷ ಸೂಚನೆ :**<br>* 1 ಮತ್ತು 2ನೇ ತರಗತಿಯ ಸಾಮರ್ಥ್ಯಗಳು ಹಾಗೂ ಕಲಿಕಾಂಶಗಳು ಸಮಾನವಾಗಿದ್ದು ಎರಡೂ ತರಗತಿಯ ಮಕ್ಕಳಿಗೆ ಚಟುವಟಿಕೆಗಳನ್ನು ನೀಡಲಾಗಿದೆ.<br>* ಈ ಚಟುವಟಿಕೆಗಳನ್ನು ಮಾಡಿಸುವಾಗ ಏಕತಾನತೆ ಉಂಟಾಗದಂತೆ ಎಚ್ಚರಿಕೆಯ ಆಟದ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | 10 ನಿ | ಸಾ.ಉ.ಉ.ಹಾ. ಬಣ್ಣದ ಹಾಳೆಗಳಿಂದ ಚಾಪೆ ತಯಾರಿಕೆ | ಮಕ್ಕಳಲ್ಲಿ ಬಣ್ಣದ ಕಾಗದ ಉಪಯೋಗಿಸಿ ಕಲೆ ಮತ್ತು ಸೃಜನಾತ್ಮಕ ಅಭಿವ್ಯಕ್ತಿಸುವ ಮನೋಭಾವ ಬೆಳೆಸುವುದು. | ಬಣ್ಣದ ಕಾಗದ ಕತ್ತರಿ | ಶಿಕ್ಷಕ | ಎರಡೂ ತರಗತಿಗಳ ಮಕ್ಕಳನ್ನು ಒಟ್ಟಾಗಿ ಕೂರಿಸಿಕೊಂಡು ಸರಳ ಸಾಮೂಹಿಕ ನೃತ್ಯ ಹೇಳಿಕೊಡುವರು. ಅದರಂತೆ ಮಕ್ಕಳು ಅಭಿನಯಿಸುವರು. | 1 ಮತ್ತು 2ನೇ ತರಗತಿಗೆ ಏಕ ಕಾಲದಲ್ಲಿ ಸಾ.ಉ.ಉ.ಹಾ. ತರಗತಿ ನಡೆಸುವುದು. | | | | ಉದಾ :  ಚಿತ್ರ – 1  ಚಿತ್ರ – 2 |
| | 10 ನಿ | | | | ಶಿಕ್ಷಕ | ಮಕ್ಕಳಿಗೆ ಶಿಕ್ಷಕರು ಈಗಾಗಲೇ ತಂದಿರುವ ½ ಅಳತೆಯ ಎರಡು ಬಣ್ಣದ ಕಾಗದಗಳನ್ನು ಹಿರೇಮಣಿಯ ಸಹಾಯದಿಂದ ವಿತರಿಸುವರು. | | | | | |
| | 55 ನಿ | | | | ಶಿಕ್ಷಕ | ಮಕ್ಕಳಿಗೆ ವಿತರಿಸಿರುವ ಬಣ್ಣದ ಹಾಳೆಗಳಲ್ಲಿ 2 ಸೆಂ.ಮೀ. ಅಳತೆಗನುಗುಣವಾಗಿ ಬಣ್ಣದ ಹಾಳೆಯ ಅಂಚನ್ನು ಹೊರತುಪಡಿಸಿ ಮಧ್ಯೆ ಭಾಗದಲ್ಲಿ ಕತ್ತರಿಸಿ ಕೊಡುವುದು. (ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರಿಕೆ ವಹಿಸುವುದು.) ಮತ್ತೊಂದು ಹಾಳೆಯನ್ನು 2 ಸೆಂ.ಮೀ.ಗೆ ಅನುಗುಣವಾಗಿ ಕತ್ತರಿಸಿಕೊಂಡು ಮಧ್ಯೆ ಮಧ್ಯೆ ಸೇರಿಸುವಂತೆ ಮಕ್ಕಳಿಗೆ ಮಾರ್ಗದರ್ಶನ ನೀಡುವರು. | | | | | |
| | 05 ನಿ | | | | ಶಿಕ್ಷಕ | * ಮಕ್ಕಳು ತಯಾರಿಸಿರುವ ಬಣ್ಣದ ಚಾಪೆಯನ್ನು ಹಿರೇಮಣಿಯ ಸಹಾಯದಿಂದ ಸಂಗ್ರಹಿಸುವರು. ಉತ್ತಮವಾಗಿ ತಯಾರಿಸಿರುವ ಮಕ್ಕಳಿಗೆ ಪ್ರೋತ್ಸಾಹಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN 56 | 05 ನಿ | ಕನ್ನಡ<br>ಪದ ಓದು ಅಕ್ಷರ ಕಲಿ : ಹಂತ – 4 (ಲ, ಷ, ಈ, ಊ, ಕ) | * ವರ್ಣಮಾಲೆ.............. (ಲ, ಷ, ಈ, ಊ, ಕ)<br>* ಅಚ್ಚಾದ ............................ ಓದುವುದು. | ಪಠ್ಯ ಪುಸ್ತಕದಲ್ಲಿನ ಅಭ್ಯಾಸಗಳು | ಶಿಕ್ಷಕ | ಹಿಂದಿನ ಅವಧಿಯಲ್ಲಿ ನೀಡಿರುವ ಗೃಹಪಾಠವನ್ನು ಪರಿಶೀಲಿಸುವರು. | ಕನ್ನಡ<br>ನಾಯಿ ಬಾಲ ಜಗ್ಗಿದ (ಕವನ) | * ಪ್ರಾಸಗಳು ಪದ್ಯಗಳು ಹಾಡುಗಳು ಮತ್ತು ಸರಳ ಕಥೆಗಳನ್ನು ಗಟ್ಟಿಯಾಗಿ ಓದುವುದು. | ಅಭಿನಯ ಗೀತೆ | | ಹಿಂದಿನ ಅವಧಿಯಲ್ಲಿನ ಗೃಹಪಾಠ ಪರಿಶೀಲಿಸುವರು, |
| | 45 ನಿ | | | ಪಠ್ಯಪುಸ್ತಕದಲ್ಲಿನ ಅಭ್ಯಾಸಗಳು | ಶಿಕ್ಷಕ | * ಪಠ್ಯಪುಸ್ತಕ ಪುಟ ಸಂಖ್ಯೆಯ 44ರ 'ಆ' ಚಟುವಟಿಕೆಗೆ ಸಂಬಂಧಿಸಿದಂತೆ ಸಾಕಷ್ಟು ಮಿಂಚುಪಟ್ಟಿಗಳ ಪದಗಳನ್ನು ಕೊಟ್ಟು ಓದಿಸುವುದು. ನಿರ್ದಿಷ್ಟ ಅಕ್ಷರವನ್ನು ಸ್ಪಷ್ಟವಾಗಿ ಉಚ್ಚರಿಸಲು ಸೂಚಿಸುವುದು.<br>* 'ಇ' ಮತ್ತು 'ಈ' ಚಟುವಟಿಕೆಗಳನ್ನು ಅಗತ್ಯ ಕಲಿಕೋಪಕರಣಗಳನ್ನು ಬಳಸಿ ಮಕ್ಕಳಿಂದ ಮಾಡಿಸುವುದು ಮತ್ತು ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಸುವುದು. | | | | ಸ್ವಕಲಿಕೆ | ಪಾಠವನ್ನು ನಕಲು ಮಾಡುವರು. |
| | 05 ನಿ | | | | ಶಿಕ್ಷಕ | ಎರಡನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸಲು ತಿಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು |
| | 25 ನಿ | | | | ಸ್ವಕಲಿಕೆ | ಎರಡನೇ ತರಗತಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>"ನಮ್ಮ ಮನೆಯಲೊಂದು ಸಣ್ಣ............<br>..........................................................<br>.........................................................."<br>ಹಾಡನ್ನು ಅಭಿನಯದೊಂದಿಗೆ ಹೇಳಿಕೊಡುವುದು. |
| 2 | 10 ನಿ | ಜೀವನ ವಿಜ್ಞಾನ<br>(ಹಗ್ಗ ಜಿಗಿಯುವ ಆಟ) ಹಗ್ಗದ ಆಟ | * ದೈಹಿಕ ಚಟುವಟಿಕೆಯುಳ್ಳ ಆಟಗಳಿಂದ ಮನೋಲ್ಲಾಸ ನಡೆಯುವುದನ್ನು ರೂಢಿಸಿಕೊಳ್ಳುವುದು. | ಸ್ಕಿಪ್ಪಿಂಗ್ ಹಗ್ಗಗಳು | ಶಿಕ್ಷಕ | ಮೊದಲಿಗೆ ಎಲ್ಲಾ ಮಕ್ಕಳನ್ನು ಶಿಕ್ಷಕರು ಆಟದ ಮೈದಾನಕ್ಕೆ ಕರೆದೊಯ್ಯುವರು. ಅವರನ್ನು ಚಿಕ್ಕ-ಚಿಕ್ಕ ಗುಂಪುಗಳನ್ನಾಗಿ ವಿಂಗಡಿಸಿ, ಅವರಿಗೆ ಹಗ್ಗವನ್ನು ವಿತರಿಸುವರು. | ಎರಡೂ ತರಗತಿಯ ವಿದ್ಯಾರ್ಥಿಗಳು ಒಟ್ಟಿಗೆ ಚಟುವಟಿಕೆಯಲ್ಲಿ (ಆಟದಲ್ಲಿ) ತೊಡಗುವರು. | | | | |
| | 60 ನಿ | | | | ಶಿಕ್ಷಕ | ಮೊದಲಿಗೆ ಶಿಕ್ಷಕರು ಹಗ್ಗದಾಟ ಆಡುವ ವಿಧಾನವನ್ನು ಮಾದರಿಯಾಗಿ ಆಡಿ ತೋರಿಸುವರು. ನಂತರ ಮಕ್ಕಳಿಗೆ ಆಡಲು ಹೇಳುವರು.<br>ಸರಿಯಾಗಿ ಆಡಲು ಬಾರದ ವಿದ್ಯಾರ್ಥಿಗಳನ್ನು ಗುರುತಿಸಿ, ಸೂಕ್ತ ಮಾರ್ಗದರ್ಶನ ನೀಡಿ, ಹಗ್ಗದಾಟ ಆಡುವುದನ್ನು ಕಲಿಸುವರು. | | | | | |
| | 10 ನಿ | | | | ಶಿಕ್ಷಕ | ನಂತರ ಎಲ್ಲಾ ಮಕ್ಕಳನ್ನು ಒಂದೆಡೆ ಸೇರಿಸಿ, ಸಾಲಾಗಿ ತರಗತಿಗೆ ತೆರಳಲು ಹೇಳುವರು. | | | | | |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕ | ಸಾಮರ್ಥ್ಯಗಳು | ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕ | ಸಾಮರ್ಥ್ಯಗಳು | ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>ಪ.ಅ.<br>35 | 10 ನಿ<br>30 ನಿ<br>40 ನಿ | ಪರಿಸರ ಅಧ್ಯಯನ<br>ದೈಹಿಕ ಸ್ವಚ್ಛತೆ | * ದೇಹದ ಅಂಗಾಂಗಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಪ್ರಾಮುಖ್ಯತೆಯನ್ನು ತಿಳಿಯುವರು.<br>* ಸ್ವಚ್ಛತೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವರು. | ಆರೋಗ್ಯಕ್ಕೆ ಪೂರಕವಾದ ಚಟುವಟಿಕೆಗಳಿಗೆ ಚಿತ್ರಪಟಗಳು | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :**<br>ಎರಡು ತರಗತಿಯ ಮಕ್ಕಳಿಗೆ ಸಮಾನ ಚಟುವಟಿಕೆ ನೀಡುವರು.<br><br>* ಉತ್ತಮ ಹಾಗೂ ಆರೋಗ್ಯಕ್ಕೆ ಪೂರಕವಾದ ಅಭ್ಯಾಸಗಳನ್ನು ಹೇಗೆ ರೂಢಿಸಿಕೊಳ್ಳಬೇಕೆಂಬುದನ್ನು ಚಿತ್ರಪಟಗಳನ್ನು ತೋರಿಸುತ್ತಾ ನೈಜ ಚಟುವಟಿಕೆಗಳನ್ನು ಮಾಡಿಸುವರು. ಹಾಗೂ ಅವುಗಳ ಸರಿಯಾದ ಕ್ರಮವನ್ನು ಹೇಳಿಕೊಟ್ಟು ಕಲಿಸುವರು.<br>– ನೆಗಡಿ ಬಂದಾಗ ಅನುಸರಿಸಬೇಕಾದ ಅಭ್ಯಾಸಗಳು<br>– ತಿಂಡಿ ತಿನ್ನುವಾಗ, ಊಟ ಮಾಡುವಾಗ ಅನುಸರಿಸಬೇಕಾದ ಸ್ವಚ್ಛತೆಯ ಕ್ರಮಗಳು.<br>– ಶೌಚಾಲಯ ಬಳಸುವ ಮುನ್ನ ಮತ್ತು ಬಳಸಿದ ನಂತರ ಆರೋಗ್ಯಕರ ಸ್ವಚ್ಛತೆಯ ಅಭ್ಯಾಸಗಳು.<br>– ಮನೆಯ ಮತ್ತು ಶಾಲೆಯ ಒಳಗಿನ ಹಾಗೂ ಹೊರಗಿನ ಸ್ವಚ್ಛತೆಯ ಬಗ್ಗೆ ನಿತ್ಯವೂ ಅನುಸರಿಸಬೇಕಾದ ಅಭ್ಯಾಸಗಳು.<br><br>**ಸೂಚನೆ :** ಮೊದಲ ಹತ್ತುನಿಮಿಷಗಳು ಎರಡೂ ತರಗತಿಯ ಮಕ್ಕಳಿಗೆ ಪಠ್ಯಪೂರಕವಾದ ಚಟುವಟಿಕೆ (ಹಾಡು, ಅಭಿನಯಗೀತೆ, ಇತರೆ ಚಟುವಟಿಕೆ) ಮಾಡಿಸುವರು.<br>ಮೇಲಿನ ಚಟುವಟಿಕೆಗಳ ಮಧ್ಯೆ ಎಚ್ಚರಿಕೆಯ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವರು. | ಪರಿಸರ ಅಧ್ಯಯನ<br>ಅಭ್ಯಾಸ – ಆರೋಗ್ಯ | ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಸ್ವಚ್ಛತೆ ಅಭ್ಯಾಸಗಳನ್ನು ತಿಳಿಯುವರು. | | | 1ನೇ ತರಗತಿ ಮತ್ತು 2ನೇ ತರಗತಿಗಳ ಸಾಮರ್ಥ್ಯ ಸಾಮ್ಯತೆ ಇರುವುದರಿಂದ 1ನೇ ತರಗತಿಯಲ್ಲಿನ ಚಟುವಟಿಕೆಯು 2ನೇ ತರಗತಿಗೂ ಅನ್ವಯವಾಗುವುದು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4** | 10 ನಿ | ಸಾ. ಉ. ಉ. ಕಾರ್ಯ<br>"ನೈಜ ವಸ್ತುಗಳನ್ನು ಬಳಸಿ ಶುಭಾಶಯ ಪತ್ರ ತಯಾರಿಸುವುದು. | * ನಿರುಪಯುಕ್ತ ನೈಜ ವಸ್ತುಗಳನ್ನು ಬಳಸಿ ಉಪಯುಕ್ತ ಸಾಮಗ್ರಿಗಳನ್ನು ತಯಾರಿಸುವ ವಿಧಾನ ಅರಿಯುವರು. | $^{1}/_{8}$ ಸೈಜಿನ ಡ್ರಾಯಿಂಗ್ ಹಾಳೆ, ಸ್ಕೆಚ್‌ಪೆನ್‌ಗಳು ಸ್ಕೇಲ್ ಒಣಗಿದ ಹೂವಿನ ದಳಗಳು, ಎಲೆಗಳು, ಹುಲ್ಲು, | ಶಿಕ್ಷಕ | ಶಿಕ್ಷಕರು ಎಲ್ಲಾ ಮಕ್ಕಳನ್ನು 4–5 ಜನರ ಗುಂಪುಗಳನ್ನಾಗಿ ಮಾಡಿ, ತರಗತಿಯಲ್ಲಿ ಕೂರಿಸುವರು. ಪ್ರತಿ ಗುಂಪಿಗೆ ಸ್ಕೆಚ್ ಪೆನ್, ಗಮ್ ಮತ್ತು ಸ್ಕೇಲ್‌ಗಳನ್ನು ವಿತರಿಸುವರು. | | | | | ಒಂದನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | | ಶಿಕ್ಷಕ | ಈಗ ಶಿಕ್ಷಕರು ಪ್ರತಿ ವಿದ್ಯಾರ್ಥಿಗೆ ಒಂದರಂತೆ ಸೈಜಿನ ಡ್ರಾಯಿಂಗ್ ಹಾಳೆಯನ್ನು ಮತ್ತು ಹಿಂದಿನ ಅವಧಿಯಲ್ಲಿ ಸಂಗ್ರಹಿಸಿಟ್ಟ ಹೂವು, ಎಲೆ, ಹುಲ್ಲುಗಳುಳ್ಳ ಪುಸ್ತಕವನ್ನು ವಿತರಿಸುವರು.<br>ಕೊಟ್ಟಿರುವ ಡ್ರಾಯಿಂಗ್ ಹಾಳೆಯನ್ನು ಮೃದುವಾದ ಮೇಲ್ಮೈ ಮೇಲೆ ಹೊರಗೆ ಬರುವಂತೆ ಅರ್ಧಕ್ಕೆ ಸರಿಯಾಗಿ ಮಡಿಸಿ, ಮುಖಪುಟದ ಭಾಗಕ್ಕೆ ಸ್ಕೆಚ್ ಪೆನ್ನಿನಿಂದ ಬಾರ್ಡರ್ ಹಾಕುವಂತೆ ಸೂಚನೆ ನೀಡುವರು. | | | | | |
| | 20 ನಿ | | | | ಶಿಕ್ಷಕ | ನಂತರ ಒಣಗಿರುವ ಹೂವಿನ ದಳ ಎಲೆ ಹಾಗೂ ಹುಲ್ಲನ್ನು ಉತ್ತಮವಾದ ವಿನ್ಯಾಸದಲ್ಲಿ ಜೋಡಿಸಿ, ಶಿಕ್ಷಕರ ಮಾರ್ಗದರ್ಶನ ಸೂಚನೆ ಪಡೆದು, ಅಂಟಿಸುವಂತೆ ಮಕ್ಕಳಿಗೆ ಸೂಚಿಸುವರು.<br> | | | | | |
| | 20 ನಿ | | | | ಶಿಕ್ಷಕ | ನಂತರ ಮಕ್ಕಳು ತಯಾರಿಸಿರುವ ಶುಭಾಶಯ ಪತ್ರಗಳನ್ನು ಪರಿಶೀಲಿಸಿ, ಅವುಗಳಿಗೆ ತಲೆಬರಹಗಳನ್ನು ಬರೆದ, ಪ್ರದರ್ಶನಕ್ಕೆ ತರಗತಿಯಲ್ಲಿ ಜೋಡಿಸುವರು.<br>ಉತ್ತಮವಾಗಿ ಶುಭಾಶಯ ಪತ್ರ ತಯಾರಿಸಿದ್ದಕ್ಕಾಗಿ ಮಕ್ಕಳನ್ನು ಅಭಿನಂದಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಫಲಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಫಲಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN 57 | 05 ನಿ | ಕನ್ನಡ<br>ಹಾಡು ಓದು ಅಕ್ಷರ ಕಲಿ : ಹಂತ – 4 ( ಲ, ಷ, ಕ, ಊ, ಕ ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒತ್ತಾಗಿ ಮತ್ತು ಬಿಡಿಯಾಗಿ ಗುರುತಿಸುವುದು (ಲ, ಷ,ಕ, ಊ, ಕ)<br>* ಅಕ್ಷರ ಪಟ್ಟಿ ಅಕ್ಷರಗಳನ್ನು ಕಲ್ಲು ಹಲಗೆ ಮೇಲೆ ಹಾಗೂ ಮಿಂಚುಪಟ್ಟಿಗಳ ಮೇಲೆ ಬರೆದು ಓದುವುದು. | ಅಕ್ಷರಗಳ ಮಿಂಚು ಪಟ್ಟಿಗಳು | ಶಿಕ್ಷಕರು | ಎರಡನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | ಕನ್ನಡ<br>ನಾಯಿ ಬಾಲ ಜಗ್ಗಿದ (ಕವನ) | * ಪ್ರಾಸಗಳು, ಪದ್ಯಗಳು ಹಾಡುಗಳು ಮತ್ತು ಸರಳ ಕಥೆಗಳನ್ನು ಗಟ್ಟಿಯಾಗಿ ಓದುವುದು. | ಅಭಿನಯ ಗೀತೆ | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :**<br>* ಯಾವುದಾದರೊಂದು ಹಾಡನ್ನು ಸಾಮೂಹಿಕವಾಗಿ ಹಾಡಿಸುವರು.<br>* ನಾಯಿ ಬಾಲ ಜಗ್ಗಿದ ಪದ್ಯವನ್ನು ಓದಿಕೊಳ್ಳಲು ತಿಳಿಸುವರು. |
| | 35 ನಿ | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :**<br>* ಪುಟ 45ರ ಚಟುವಟಿಕೆ ಮಾಡಿಸುವರು. ಅದರಂತೆ ಸರಳ ಪದಗಳ ಮಿಂಚುಪಟ್ಟಿಗಳನ್ನು ಕೊಟ್ಟು ಓದಿಸುವರು.<br>* ಅಕ್ಷರಗಳು, ಪದಗಳು ಇತ್ಯಾದಿ ಮಿಂಚುಪಟ್ಟಿ ಬಳಸಿ ಅಕ್ಷರ ಗುರುತಿಸುವ, ಉಚ್ಚರಿಸುವ ಹಾಗೂ ಪದಗಳನ್ನು ಓದಿಸುವ ಚಟುವಟಿಕೆ.<br>* ಮಿಂಚುಪಟ್ಟಿಗಳಲ್ಲಿರುವ ಬಿಡಿ ಅಕ್ಷರಗಳನ್ನು ಬಳಸಿಕೊಂಡು ಹೇಳಿದ ಪದ ರಚಿಸುವುದು. ಪದಗಳನ್ನು ರಚಿಸುವಾಗ ಹಿಂದಿನ ಹಂತದ ಅಕ್ಷರಗಳನ್ನು ಬಳಸಿಕೊಳ್ಳುವರು. | | | | ಸ್ವಕಲಿಕೆ / ಹಿರೇಮಣಿ | * ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | * "ಪದರಚನೆಯ ಆಟ" ಸಾಕಷ್ಟು ಸಂಖ್ಯೆಯ 1/64 ಅಳತೆಯ ಅಕ್ಷರ ಮಿಂಚುಪಟ್ಟಿಗಳನ್ನು ಕೊಟ್ಟು ಪದರಚಿಸಲು ಹೇಳುವುದು. ಹೆಚ್ಚು ಪದಗಳನ್ನು ರಚಿಸಿದವರಿಗೆ ಬಹುಮಾನ ಎಂದು ಪ್ರೋತ್ಸಾಹಿಸುವರು. | | | ಪಠ್ಯ ಪುಸ್ತಕ | ಶಿಕ್ಷಕ | **ಕಲಿಕೆ ಚಟುವಟಿಕೆ :**<br>ಮಕ್ಕಳಿಗೆ ಪಠ್ಯಪುಸ್ತಕ ಪುಟ 13ರ "ನಾಯಿ ಬಾಲ ಜಗ್ಗಿದ" ಪದ್ಯದಲ್ಲಿ 'ನಮ್ಮ ಪುಟ್ಟ' ಪಠ್ಯವನ್ನು ಹಾವಭಾವದೊಂದಿಗೆ ಅಭಿನಯ ಪೂರ್ವಕವಾಗಿ ಹೇಳಿಕೊಡುವರು. |
| | 35 ನಿ | | | | ಗುಂಪು / ವೈಯಕ್ತಿಕ ಚಟುವಟಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br>ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಹೆಚ್ಚು ಪದದ ರಚಿಸಿದ ವಿದ್ಯಾರ್ಥಿಗಳನ್ನು ಪ್ರಶಂಸಿಸುವರು. | | | | | ಮಕ್ಕಳು ಶಿಕ್ಷಕರೊಂದಿಗೆ ಅಭಿನಯಿಸುತ್ತಾ ಪದ್ಯವನ್ನು ಕಲಿಯುವರು.<br>* ಸರಳ ಪ್ರಶ್ನೆಗಳನ್ನು ಕೇಳುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಸಾಮರ್ಥ್ಯ | ಕಲಿಕಾ ಫಲ | ಬಳಸಬೇಕಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಸಾಮರ್ಥ್ಯ | ಕಲಿಕಾ ಫಲ | ಬಳಸಬೇಕಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 10 ನಿ | **ಗಣಿತ** **ಸಂಕಲನ** (ಮೊತ್ತ 9ಕ್ಕೆ ಮೀರದಂತೆ) | * ಮೊತ್ತ 9ಕ್ಕೆ ಮೀರದಂತೆ + ಮತ್ತು = ಚಿಹ್ನೆ ಬಳಸಿ ಸಂಕಲನ ಮಾಡುತ್ತಾರೆ. | ಮೊತ್ತ 9ಕ್ಕೆ ಮೀರದಂತೆ ಸಂಕಲನದ ಲೆಕ್ಕಗಳನ್ನು ಒಳಗೊಂಡ ಕಾಗದದ ಮೀನುಗಳು, ಆಯಸ್ಕಾಂತದ ಗಾಳ | ಶಿಕ್ಷಕ | ಮೊತ್ತ 9ಕ್ಕೆ ಮೀರದಂತೆ ಸಂಕಲನದ ಲೆಕ್ಕಗಳಿಗೆ ಸಂಬಂಧಿಸಿದಂತೆ, ಮೀನು ಮತ್ತು ಗಾಳ ಆಟ ಆಡಿಸಲು ಪೂರ್ವ ಸಿದ್ಧತೆ ಮಾಡಿಕೊಳ್ಳುವರು. ಹಿರೇಮಣಿಯ ನೇತೃತ್ವದಲ್ಲಿ ಚಟುವಟಿಕೆ ಮಾಡಲು ಸೂಚನೆ ನೀಡುವರು. | **ಗಣಿತ** **ವ್ಯವಕಲನ** (ದಶಕ ರಹಿತ ಮತ್ತು ದಶಕ ಸಹಿತ) | * ಎರಡು ಸಂಖ್ಯೆಗಳ ದಶಕ ರಹಿತ, ದಶಕ ಸಹಿತ ವ್ಯವಕಲನ ಮಾಡುತ್ತಾರೆ. * ನಿತ್ಯ ಜೀವನದಲ್ಲಿ ವ್ಯವಕಲನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸುತ್ತಾರೆ. | ಸಂಖ್ಯೆಗಳ ಮಿಂಚುಪಟ್ಟಿ "–" ಚಿಹ್ನೆ ಮಿಂಚುಪಟ್ಟಿ | ಶಿಕ್ಷಕ | ಶಿಕ್ಷಕರು ಹಿರೇಮಣಿಗೆ ಎಲ್ಲಾ ವಿದ್ಯಾರ್ಥಿಗಳಿಗೂ ವ್ಯವಕಲನ ಚಿಹ್ನೆ ಹಾಗೂ ಸಮ ಚಿಹ್ನೆಯ ಮಿಂಚುಪಟ್ಟಿ ವಿತರಿಸಲು ಹೇಳಿ 1 ರಿಂದ 99ರವರೆಗಿನ ಮಿಂಚುಪಟ್ಟಿಗಳನ್ನು ಮೇಜಿನ ಮೇಲೆ ಜೋಡಿಸುವಂತೆ ಸೂಚನೆ ನೀಡುವರು. |
| | 20 ನಿ | | | | ಹಿರೇಮಣಿ | ವಿದ್ಯಾರ್ಥಿಗಳು ಮೀನು ಮತ್ತು ಗಾಳ ಆಟ ಆಡುತ್ತಾ ಸಂಕಲನದ ಲೆಕ್ಕಗಳನ್ನು ಮಾಡುವರು [ಕಪ್ಪು ಹಲಗೆಯ ಮೇಲೆ ಲೆಕ್ಕಗಳನ್ನು ಬರೆಯುವರು] | | | | ಶಿಕ್ಷಕ | ಶಿಕ್ಷಕರು, ಪ್ರತಿ ವಿದ್ಯಾರ್ಥಿಯಿಂದ ಎರಡು ಸಂಖ್ಯೆಗಳನ್ನು ಆಯ್ಕೆ ಮಾಡಿ, ಅವುಗಳಲ್ಲಿ ದೊಡ್ಡದು ಚಿಕ್ಕದನ್ನು ಗುರುತಿಸಿ, ನಂತರ ಕ್ರಮವಾಗಿ ದೊಡ್ಡ ಸಂಖ್ಯೆ, ವ್ಯವಕಲನ ಚಿಹ್ನೆ ಹಾಗೂ ಚಿಕ್ಕ ಸಂಖ್ಯೆಯನ್ನು ಜೋಡಿಸಿ, ನಂತರ ಅದನ್ನು ಓದುವ ವಿಧಾನವನ್ನು ಪರಿಚಯಿಸುವರು.<br>ಉದಾ : [40] ಮತ್ತು [24] [40] – ದೊಡ್ಡದ್ದು<br>ಜೋಡಣೆ : [40] [–] [24] [24] – ಚಿಕ್ಕದು.<br>ಓದುವುದು : 40ರಲ್ಲಿ 24ನ್ನು ಕಳೆಯುವುದು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆ ಮತ್ತು ಉತ್ತರಗಳನ್ನು ಪರಿಶೀಲಿಸಿದ ನಂತರ ಶಿಕ್ಷಕರು ಪಠ್ಯಪುಸ್ತಕದ ಪುಟ – 61ರ ಸಂಕಲನದ ಅಭ್ಯಾಸಗಳನ್ನು ಮಾಡುವಂತೆ ಸೂಚನೆ ನೀಡುವರು. | | | | ಸ್ವಕಲಿಕೆ | ಮಕ್ಕಳು ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು. |
| | 30 ನಿ | | | | ಸ್ವಕಲಿಕೆ | ಮಕ್ಕಳು ಪುಟ–61ರಲ್ಲಿನ ಅಭ್ಯಾಸ ಚಟುವಟಿಕೆಯನ್ನು ಮಾಡುವರು. | | | | ಶಿಕ್ಷಕ | ಶಿಕ್ಷಕರು ಒಂದು ಸಂಖ್ಯೆಯನ್ನು ಹತ್ತು – ಬಿಡಿಗಳಾಗಿ ವಿಭಾಗಿಸಿ ನಂತರ ಬಿಡಿಗಳಲ್ಲಿ ಬಿಡಿಗಳನ್ನು ಹಾಗೂ ಹತ್ತುಗಳಲ್ಲಿ ಹತ್ತುಗಳನ್ನು ಕಳೆಯುವ ವಿಧಾನವನ್ನು ವಿವರಿಸುವರು. (ದಶಕ ರಹಿತ)<br>ಉದಾ : 25 ······> 2 ಹತ್ತು + 5 ಬಿಡಿ<br>–13 ······> 1 ಹತ್ತು + 3 ಬಿಡಿ<br>1 ಹತ್ತು + 2 ಬಿಡಿ = 12<br>ಇದೇ ಮಾದರಿಯಲ್ಲಿ ಮಕ್ಕಳಿಂದ ಹಲವಾರು ಲೆಕ್ಕಗಳನ್ನು ಶಿಕ್ಷಕರು ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಪುಸ್ತಕಗಳನ್ನು ಪರಿಶೀಲಿಸಿ ತಿದ್ದುವರು. | | | | ಶಿಕ್ಷಕ | ಮಕ್ಕಳ ಚಟುವಟಿಕೆಯನ್ನು ಶಿಕ್ಷಕರು ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 ಮೊದಲ 40 ನಿ KAN 97½ | 20 ನಿ | ಕನ್ನಡ<br>ಪದ ಓದು ಅಕ್ಷರ ಕಲಿ : ಹಂತ 4 (ಲ, ಷ, ಈ, ಊ, ಕ) | * ವರ್ಣಮಾಲೆಯ ಸರಳ ...............................<br>* ಅಚ್ಚಾದ ದಪ್ಪ ಅಕ್ಷರಗಳನ್ನು ............................ | ಮಿಂಚು ಪಟ್ಟಿಗಳು | ಶಿಕ್ಷಕ | ಮಿಂಚುಪಟ್ಟಿಗಳನ್ನು (ಅಕ್ಷರಗಳ ಮತ್ತು ಪದಗಳ ಮಿಂಚುಪಟ್ಟಿ) ಬಳಸಿ ಪದಗಳು ಮತ್ತು ವಾಕ್ಯಗಳನ್ನು ರಚಿಸುವ ಚಟುವಟಿಕೆ ಮಾಡಿಸುವರು. | ಕನ್ನಡ<br>ನಾಯಿ ಬಾಲ ಜಗ್ಗಿದ | ಪ್ರಾಸಗಳು ಪದ್ಯಗಳು, ಹಾಡುಗಳು ಮತ್ತು ..............................<br>.............................. | | ಶಿಕ್ಷಕ | ಮಕ್ಕಳು ಪಠ್ಯಪುಸ್ತಕ ಪುಟ 13ನ್ನು ತೆರೆಯಲು ಸೂಚಿಸುವರು. ಪದ್ಯವನ್ನು ಹಾಡಲು ಅಗತ್ಯ ಸೂಚನೆಗಳನ್ನು ನೀಡುವರು. |
| | 20 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಹಿರೇಮಣಿಯ ಸಹಾಯದಿಂದ ಮುಂದುವರೆಸುವರು. | | | | ಶಿಕ್ಷಕ | ಹಿಂದಿನ ತರಗತಿಯಲ್ಲಿ ಹೇಳಲಾದ ಪದ್ಯವನ್ನು ಮಕ್ಕಳಿಂದ ಹಾಡಿಸುವರು. |
| 3 ನಂತರದ 40 ನಿ | 05 ನಿ | ಜೀವನ ವಿಜ್ಞಾನ<br>ಊರ್ಧ್ವ ನಮನಾಸನ (ಸೂರ್ಯನಮಸ್ಕಾರದ 1ನೇ ಆಸನ) | ಮಕ್ಕಳಲ್ಲಿ ದೈಹಿಕ ಸಾಮರ್ಥ್ಯ ಹಾಗೂ ಸರ್ವರಿಗೂ ಅಭಿವೃದ್ಧಿಯಾಗ ಬೇಕಾದರೆ ಯೋಗಾಸನಗಳ ಪಾತ್ರದ ಮಹತ್ವ ತಿಳಿಯುವರು. | ಸೂರ್ಯ ನಮಸ್ಕಾರ ವಿವಿಧ ಭಂಗಿಗಳ ಚಿತ್ರಪಟ | ಶಿಕ್ಷಕ | ಒಂದು ಮತ್ತು ಎರಡನೇ ತರಗತಿಯ ಮಕ್ಕಳನ್ನು ಒಟ್ಟಿಗೆ ಕೂರಿಸಿಕೊಂಡು ಯೋಗಾಸನದ ಮಹತ್ವದ ಬಗ್ಗೆ ಒಂದು ಗೀತೆಯನ್ನು ಹೇಳಿಕೊಡುವುದು.<br>ಯೋಗ...............................<br>.............................. ಬೇಕು ಜೀವನಕ್ಕೆ. | 1 ಮತ್ತು 2ನೇ ತರಗತಿಗಳ ಮಕ್ಕಳಿಗೆ ಒಟ್ಟಿಗೆ 1ನೇ ತರಗತಿಯಲ್ಲಿರುವಂತೆ ಚಟುವಟಿಕೆಯಲ್ಲಿ ತೊಡಗಿಸುವರು. | | | | |
| | 30 ನಿ | | | ಊರ್ಧ್ವ ನಮಸ್ಕಾರ ಮಾಡುತ್ತಿರುವ ಚಿತ್ರಪಟ | ಶಿಕ್ಷಕ | ಎರಡೂ ತರಗತಿಗಳ ಮಕ್ಕಳನ್ನು ಒಟ್ಟಿಗೆ ಸೇರಿಸಿ ಶಾಲಾ ಕೊಠಡಿಯಲ್ಲಿ ಮೊದಲು ಒಬ್ಬರಿಂದ ಒಬ್ಬರಿಗೆ ಅಂತರವಿರುವಂತೆ ಕೂರಿಸಿ ಅವರಿಗೆ ಯೋಗಾಸನಗಳ ಮಹತ್ವ ತಿಳಿಸುವುದು.<br>ಆಸನಾಭ್ಯಾಸದ ಮುನ್ನ ಸರಳ ವ್ಯಾಯಾಮಗಳನ್ನು ಮಾಡಿಸಿ ನಂತರ ಸೂರ್ಯನಮಸ್ಕಾರದ ಮೊದಲಿನ ಹಂತವಾದ ಊರ್ಧ್ವನಮನಾಸನ ಮಾಡಿಸುವುದು.<br>* ಊರ್ಧ್ವನಮನಾಸನ ಎಂದರೆ ಮೇಲ್ಮುಖವಾಗಿ ನಮಸ್ಕರಿಸುವ ಆಸನ. (ನೋಡಿ : ಜೀವನ ವಿಜ್ಞಾನ ಕೈಪಿಡಿ). | | | | | |
| | 05 ನಿ | | | | ಶಿಕ್ಷಕ | ನಂತರ ಎರಡೂ ತರಗತಿಗಳ ಮಕ್ಕಳಿಗೆ ಪುನಃ ಸ್ವಲ್ಪ ಸಮಯ ಪ್ರಾಣಾಯಾಮ ಮಾಡಿಸಿ ತರಗತಿಗೆ ಮರಳುವುದು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ಕಲಿಕಾ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ಕಲಿಕಾ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4** ಮೊದಲ 40 ನಿ | 10 ನಿ | ಸಾ.ಉ.ಉ. ಕಾರ್ಯ ಬಣ್ಣದ ಪಟ್ಟಿಯಿಂದ ಹಾರ ಮಾಡುವುದು | * ಸುಲಭವಾಗಿ ಲಭ್ಯವಸ್ತುಗಳನ್ನು ಬಳಸಿ ತರಗತಿಯನ್ನು ಸಿಂಗರಿಸುವುದನ್ನು ಅಭ್ಯಾಸ ಮಾಡಿಸುವುದು. | ತೆಳುವಾದ ಬಣ್ಣದ ಹಾಳೆಗಳು (ಪಟ್ಟಿಗಳು 4 ಸೆಂ.ಮಿ X 50 ಸೆಂ.ಮೀ.) | ಶಿಕ್ಷಕ | ಶಿಕ್ಷಕರು ಮಕ್ಕಳನ್ನೆಲ್ಲಾ ವೃತ್ತಾಕಾರದಲ್ಲಿ ಕೂರಿಸಿ, ಅವರಿಗೆ ವಿವಿಧ ಬಣ್ಣದ ಹಾಳೆಗಳ ಉದ್ದ ಪಟ್ಟಿಗಳನ್ನು ವಿತರಣೆ ಮಾಡುವರು. | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | |
| | 20 ನಿ | | | | ಶಿಕ್ಷಕ | ಬಣ್ಣದ ಹಾಳೆಗಳಿಂದ ಹಾರ ಮಾಡುವ ವಿಧಾನವನ್ನು ಮಕ್ಕಳಿಗೆ ವಿವರಿಸುತ್ತಾ ಶಿಕ್ಷಕರು ಮಾದರಿಯಾಗಿ ಮಾಡಿ ತೋರಿಸುತ್ತಾ, ಜೊತೆ-ಜೊತೆಯಾಗಿ ಮಕ್ಕಳಿಗೂ ಮಾಡಲು ಸೂಚನೆ ನೀಡುವರು.  ಉದಾ : ಎರಡು ಕಾಗದದ ಪಟ್ಟಿಗಳನ್ನು ಒಂದರ ಮೇಲೆ ಇನ್ನೊಂದರ ತುದಿ ಬರುವಂತೆ ಜೋಡಿಸಿಟ್ಟುಕೊಂಡು, ಅದನ್ನು ಪರಸ್ಪರ ಎದುರುಬದುರಾಗಿ ಒಂದರ ಮೇಲೊಂದರಂತೆ ಮಡಿಸುತ್ತಾ ಹೋಗುವುದು ಪಟ್ಟಿಗಳು ಪೂರ್ಣ ಮುಗಿದ ನಂತರ ಕಾಗದದ ಎರಡೂ ತುದಿಗಳನ್ನು ಹಿಡಿದು ಮೇಲೆತ್ತಿದರೆ, ಹಾರ ತಯಾರಾಗುತ್ತದೆ. | | | | | |
| | 10 ನಿ | | | | ಶಿಕ್ಷಕ | ಕೊನೆಯಲ್ಲಿ ಶಿಕ್ಷಕರು ಎಲ್ಲಾ ಮಕ್ಕಳು ಮಾಡಿದ ಹಾರಗಳನ್ನು ತರಗತಿಯ ಗೋಡೆಗಳ ಮೇಲ್ಭಾಗಕ್ಕೆ ಅಂಟಿಸಿ ತರಗತಿಯನ್ನು ಸುಂದರಗೊಳಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4** ನಂತರದ **40** ನಿ | 10 ನಿ | **ಮೌಲ್ಯ ಶಿಕ್ಷಣ "ಹಿರಿಯರಿಗೆ ಗೌರವ"** | * ಹಿರಿಯರೊಂದಿಗೆ ದೈನಂದಿನ ಜೀವನದಲ್ಲಿ ಹೇಗೆ ವರ್ತಸಬೇಕು ಮತ್ತು ನಡೆದುಕೊಳ್ಳಬೇಕು ಎಂಬುದನ್ನು ಅರಿಯವರು. | | ಶಿಕ್ಷಕ | ಮೊದಲಿಗೆ ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳನ್ನು ಒಟ್ಟಿಗೆ, ಒಂದೆಡೆ ಕೂರಿಸಿಕೊಂಡು ತಮ್ಮ ಮನೆಯಲ್ಲಿ ಇರುವ ಜನ ಸಂಖ್ಯೆ ಹಾಗೂ ಜನರ ಪರಿಚಯ ಮಾಡಿಕೊಡಲು ಹೇಳುವರು. | ಎರಡೂ ತರಗತಿಯ ಸಾಮರ್ಥ್ಯಗಳು ಮತ್ತು ಮೌಲ್ಯಗಳು ಸಂಪೂರ್ಣ ಸಹಸಂಬಂಧಿ ಹೊಂದಿರುವುದರಿಂದ ಎರಡೂ ತರಗತಿಯ ಮಕ್ಕಳು ಒಟ್ಟಿಗೆ ಒಂದೇ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | |
| | 20 ನಿ | | | ಮನೆಯಲ್ಲಿನ ಸದಸ್ಯರು ಒಟ್ಟಿಗೆ ಸೇರಿ ಸಂತೋಷ ದಿಂದಿರುವ ಚಿತ್ರಪಟ | ಶಿಕ್ಷಕ | ನಂತರ ಶಿಕ್ಷಕರು ಮಕ್ಕಳಿಂದ ತಾವು ಮನೆಯಲ್ಲಿ ಮಾಡುವ ಕೆಲಸಗಳನ್ನು ಪಟ್ಟಿಮಾಡಲು ಹೇಳುವರು. ನಂತರ ಕೆಳಗೆ ಸೂಚಿಸಿರುವ ವಿಷಯಗಳನ್ನು ಕುರಿತು ಮಕ್ಕಳಿಗೆ ವಿವರಿಸಿ, ಮಾರ್ಗದರ್ಶನ ನೀಡುವರು.<br>* ಮನೆಯಲ್ಲಿರುವ ಹಿರಿಯರನ್ನು ಗೌರವದಿಂದ ಸಂಬೋಧಿಸಬೇಕು.<br>* ಹಿರಿಯರ ಮತ್ತು ಕುಟುಂಬದ ಇತರೇ ಸದಸ್ಯರ ಕೆಲಸಕಾರ್ಯಗಳಲ್ಲಿ ಸಹಕರಿಸಬೇಕು.<br>* ಹಿರಿಯರು ಹೇಳಿದ ಮಾತನ್ನು ಕೇಳಬೇಕು. ಅವರು ಹೇಳಿದ ಕೆಲಸಗಳನ್ನು ಮಾಡಬೇಕು.<br>ಶಿಕ್ಷಕರು ವಿವಿಧ ಸನ್ನಿವೇಶಗಳ ಉದಾಹರಣೆ ನೀಡುತ್ತಾ, ಮೇಲಿನ ವಿಷಯಗಳನ್ನು ವಿವರಿಸುವರು. | | | | | |
| | 10 ನಿ | | | | ಶಿಕ್ಷಕ | ಕೊನೆಯಲ್ಲಿ ಶಿಕ್ಷಕರು ಕೆಲವು ವಿದ್ಯಾರ್ಥಿಗಳಿಂದ "ತಾವು ಮನೆಯಲ್ಲಿ ಹೇಗೆ ಹಿರಿಯರಿಗೆ ಸಹಕರಿಸುತ್ತೇವೆ" ಎಂಬುದನ್ನು ತಮ್ಮ ಮಾತಿನಲ್ಲಿ ಹೇಳುವಂತೆ ಸೂಚಿಸುವರು. ಉತ್ತಮ ಅಂಶಗಳನ್ನು ಹೇಳಿದ ವಿದ್ಯಾರ್ಥಿಯನ್ನು ಅಭಿನಂದಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1**<br>**KAN**<br>**58½** | 20 ನಿ | **ಕನ್ನಡ**<br>**ಕಣ್ಣು ಮುಚ್ಚಾಲೆ ಆಟ** | * ಸರಳ ವಾಕ್ಯಗಳನ್ನು ಸರಿಯಾಗಿ ಪುನರುಚ್ಚರಿಸುವುದು. ಆಲಿಸಿದ ನಂತರ ಯಾರು ? ಯಾವಾಗ ? ಮತ್ತು ಎಲ್ಲಿ ? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವುದು. | ಅಭಿನಯ ಗೀತೆ | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :**<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿಕೊಂಡು<br>“ಗುಲಾಬಿ ಹೂವೆ ಬಿಸಿಲಲಿ ಕುಳಿತು<br>--------------------<br>--------------------<br>ಸುತ್ತಮುತ್ತ ತಿರುಗು ಇಷ್ಟ ಬಂದವರನ್ನು ಮುಟ್ಟು”<br>ಈ ಹಾಡಿನೊಂದಿಗೆ ಆಟ ಆಡಿಸುವರು. | **ಕನ್ನಡ**<br>**ನಾಯಿ ಬಾಲ ಜಗ್ಗಿದ (ಕವನ)** | * ಪ್ರಾಸಗಳು, ಪದ್ಯಗಳು, ಹಾಡುಗಳು ಮತ್ತು ಸರಳ ಕಥೆಗಳನ್ನು ಗಟ್ಟಿಯಾಗಿ ಓದುವುದು. | ಅಭಿನಯ ಗೀತೆ | ಶಿಕ್ಷಕ | ಒಂದನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಹಂತ 1,2,3,4ದ ಅಕ್ಷರಗಳನ್ನು ವಾಲ್‌ಸ್ಲೇಟಿನಲ್ಲಿ ಬರೆಯಲು ತಿಳಿಸುವುದು. | | | | ಶಿಕ್ಷಕ | ಪಠ್ಯಪುಸ್ತಕವನ್ನು ತೆರೆಯಲು ಸೂಚಿಸುವರು. ಮತ್ತು ಮುಂದಿನ ಪಾಠಕ್ಕೆ ಅಣಿಯಾಗುವಂತೆ ತಿಳಿಸುವರು. |
| | 55 ನಿ | | | ವಾಲ್‌ಪ್ಲೇಟ್ | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br><br>ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | ಶಿಕ್ಷಕ | * ಹಿಂದಿನ ತರಗತಿಯಲ್ಲಿ ಕಲಿಸಲಾದ ಪದ್ಯವನ್ನು ಸಾಮೂಹಿಕವಾಗಿ ಅಭಿನಯದೊಂದಿಗೆ ಹಾಡಿಸುವುದು.<br>* “ನಮ್ಮ ಮನೆ” ಪದ್ಯವನ್ನು ಹಾವ-ಭಾವದೊಂದಿಗೆ ಹೇಳಿಕೊಡುವರು ಹಾಗೂ ಮಕ್ಕಳಿಂದ ಹಾಡಿಸುವರು.<br><br>ಮೇಲಿನ ಪದ್ಯಕ್ಕೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳುವರು. |

“ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು”.

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 15 ನಿ | ಗಣಿತ<br>ಸಂಕಲನ | * ಮೊತ್ತ 9ಕ್ಕೆ ಮೀರದಂತೆ + ಮತ್ತು = ಚಿಹ್ನೆ ಬಳಸಿ ಸಂಕಲನ ಮಾಡುವುದು. | ಸಂಕಲನದ ಲೆಕ್ಕಗಳನ್ನು ಒಳಗೊಂಡ ಕಾರ್ಡ್‌ಗಳು | ಶಿಕ್ಷಕ | ಮೊದಲಿಗೆ ಮಕ್ಕಳನ್ನು ಅವರ ಸಂಖ್ಯೆಗಳಿಗೆ ಅನುಗುಣವಾಗಿ ಚಿಕ್ಕ-ಚಿಕ್ಕ ಗುಂಪುಗಳನ್ನಾಗಿ ಮಾಡಿ, ಸಂಕಲನದ ಲೆಕ್ಕಗಳುಳ್ಳ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡ ಎಲ್ಲಾ ವಿದ್ಯಾರ್ಥಿಗಳಿಗೂ ಅವುಗಳನ್ನು ವಿತರಿಸಿ ಲೆಕ್ಕಗಳನ್ನು ಮಾಡುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡುವರು. | ಗಣಿತ<br>ವ್ಯವಕಲನ (ದಶಕ ರಹಿತ ಮತ್ತು ದಶಕ ಸಹಿತ) | * ಎರಡು ಸಂಖ್ಯೆಗಳ ದಶಕ ರಹಿತ ಮತ್ತು ದಶಕ ಸಹಿತ ವ್ಯವಕಲನದ ಲೆಕ್ಕಗಳನ್ನು ಮಾಡುವುದು.<br>* ನಿತ್ಯ ಜೀವನದಲ್ಲಿ ವ್ಯವಕಲನಕ್ಕೆ ಸಂಬಂಧಿಸಿದಂತೆ, ಸಮಸ್ಯೆಗಳನ್ನು ಬಿಡಿಸುವುದು. | ಪಠ್ಯ ಪುಸ್ತಕ | ಶಿಕ್ಷಕ | ಕಪ್ಪು ಹಲಗೆಯ ಮೇಲೆ 4 ಎರಡು ಸಂಖ್ಯೆಗಳ ವ್ಯವಕಲನದ ಲೆಕ್ಕಗಳನ್ನು ಹಾಕಿ ಅವುಗಳನ್ನು ಸ್ಥಾನಗಳಿಗೆ ಅನುಗುಣವಾಗಿ ಬಿಡಿಸಿ, ವ್ಯವಕಲನ ಮಾಡುವಂತೆ ಸೂಚನೆ ನೀಡುವರು ವಿದ್ಯಾರ್ಥಿಗಳು ಸಂಖ್ಯೆಗಳನ್ನು ವಿಸ್ತರಿಸಿ ವ್ಯವಕಲನ ಮಾಡುವರು. |
| | 20 ನಿ | | | | ಸ್ವಕಲಿಕೆ | ಮಕ್ಕಳು ತಮ್ಮ-ತಮ್ಮಲ್ಲೇ ಮಿಂಚುಪಟ್ಟಿಗಳನ್ನು ವಿನಿಮಯ ಮಾಡಿಕೊಳ್ಳುತ್ತಾ ಸಂಕಲನ ಲೆಕ್ಕಗಳನ್ನು ಮಾಡುವರು.<br>ಉದಾ : 1) 2 + 3 = □<br>2) 5 + 4 = ___ | | | | ಶಿಕ್ಷಕ | ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಲೆಕ್ಕಗಳನ್ನು ಪರಿಶೀಲಿಸಿ, ನಂತರ 20ಕ್ಕೆ ಮೀರದಂತಹ ಸಂಖ್ಯೆಗಳನ್ನು ಗೆರೆ ಹಾಕ್ಕೊಂಡು ವ್ಯವಕಲನ ಮಾಡುವ ವಿಧಾನವನ್ನು ಪರಿಚಯಿಸುವರು.<br>ಹಾಗೂ ವಿದ್ಯಾರ್ಥಿಗಳಿಂದಲೇ ಕೆಲವು ಲೆಕ್ಕಗಳನ್ನು ಮಾಡಿಸಿ, ವ್ಯವಕಲನದ ವಿಧಾನವನ್ನು ಪುನರ್ಮನನ ಮಾಡಿಸುವರು.<br>ಉದಾ : 1) 14 − 6 = 8 ||||||||||||||<br>ಇದೇ ಮಾದರಿಯ ಲೆಕ್ಕಗಳು ಪುಟ – 96ರಲ್ಲಿ ಇರುವುದರಿಂದ ಈ ಲೆಕ್ಕಗಳನ್ನು ಬಿಡಿಸುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಸೂಚನೆ ನೀಡುವರು. |
| | 35 ನಿ | | | | ಶಿಕ್ಷಕ | ಶಿಕ್ಷಕರು ವಿದ್ಯಾರ್ಥಿಗಳ ಚಟುವಟಿಕೆಯನ್ನು ಪರಿಶೀಲಿಸುತ್ತಾ, ತಪ್ಪು ಉತ್ತರ ಬರೆದ ವಿದ್ಯಾರ್ಥಿಗೆ ಮತ್ತೊಮ್ಮೆ ವಿವಿಧ ವಸ್ತುಗಳನ್ನು ಬಳಸಿ ಸಂಕಲನ ಮಾಡುವ ವಿಧಾನವನ್ನು ಅಭ್ಯಾಸ ಮಾಡಿಸುವರು. ಮಿಂಚುಪಟ್ಟಿ ವಿನಿಮಯಗೊಳಿಸಲು ಸಹಕರಿಸುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪಠ್ಯಪುಸ್ತಕದ ಪುಟ–96ರಲ್ಲಿ ಇರುವ ವ್ಯವಕಲನದ ಲೆಕ್ಕಗಳನ್ನು ಮಾಡುವರು. |
| | 10 ನಿ | | | | ಶಿಕ್ಷಕ | ಅತಿ ಹೆಚ್ಚು ಮಿಂಚುಪಟ್ಟಿಗಳನ್ನು ಬಳಸಿ ಲೆಕ್ಕ ಮಾಡಿರುವ ವಿದ್ಯಾರ್ಥಿಯನ್ನು ಶಿಕ್ಷಕರು ಗುರುತಿಸಿ ಅಭಿನಂದಿಸುವರು | | | | ಶಿಕ್ಷಕ | ಮಕ್ಕಳು ಮಾಡಿರುವ ಲೆಕ್ಕಗಳನ್ನು ಪರಿಶೀಲಿಸಿ ಅವಶ್ಯಕವಿದ್ದಲ್ಲಿ ತಿದ್ದುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ಕಲಿಕಾ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ಕಲಿಕಾ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 80 ನಿ | ಸಾ.ಉ.ಉ. ಕಾರ್ಯ ಬೆಂಕಿಪೆಟ್ಟಿಗೆಯಿಂದ ಆಟದ ಲಾರಿ ತಯಾರಿಕೆ | * ಹಳೆಯ ಬೆಂಕಿ ಪೆಟ್ಟಿಗೆಗಳನ್ನು ಉಪಯೋಗಿಸಿಕೊಂಡು ಆಟದ ಲಾರಿಯನ್ನು ತಯಾರಿಸುವುದು. | ಹಳೆಯ ಬೆಂಕಿ ಪೆಟ್ಟಿಗೆಗಳು ತೆಂಗಿನ ಗರಿಯ ಕಡ್ಡಿಗಳು | ಶಿಕ್ಷಕರು | ಮಕ್ಕಳು ತಂದಿರುವ ಹಳೆಯ ಬೆಂಕಿ ಪೆಟ್ಟಿಗೆಗಳನ್ನು ವಿವಿಧ ರೀತಿಯಲ್ಲಿ ಸೇರಿಸಿ ಅವುಗಳಿಂದ ಆಟದ ಲಾರಿಯನ್ನು ತಯಾರಿಸಿ ಮಕ್ಕಳಿಗೆ ತೋರಿಸುವರು. ಮಕ್ಕಳನ್ನು ಸಂಖ್ಯೆಗನುಗುಣವಾಗಿ ಗುಂಪುಗಳನ್ನು ಮೂರು ಅಥವ ನಾಲ್ಕು ಮಾಡಿ ಪ್ರತಿ ಗುಂಪಿನಿಂದ ಒಂದೊಂದು ಆಟದ ಲಾರಿಯನ್ನು ತಯಾರಿಸುವಂತೆ ತಿಳಿಸುವರು.<br>ಶಿಕ್ಷಕರ ಮಾರ್ಗದರ್ಶನದಂತೆ ಗುಂಪುಗಳಲ್ಲಿ ಆಟದ ಲಾರಿಯನ್ನು ತಯಾರಿಸಿ ನಂತರ ತರಗತಿಯಲ್ಲಿ ಪ್ರದರ್ಶಿಸುವರು. ಉತ್ತಮವಾಗಿ ತಯಾರಿಸಿದ ಮಕ್ಕಳನ್ನು ಪ್ರಶಂಶಿಸಿಸುವರು. | | | | | ಒಂದನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸುವರು. |

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4**<br>**EVS**<br>**36** | 10 ನಿ | **ಪರಿಸರ ಅಧ್ಯಯನ**<br>**ದೇಹದ ಸ್ವಚ್ಛತೆ** | * ದೇಹದ ಅಂಗಾಂಗಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಪ್ರಾಮುಖ್ಯತೆಯನ್ನು ತಿಳಿಯುವರು<br>* ಸ್ವಚ್ಛತೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವರು. | ಅಭಿನಯ ಗೀತೆ | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿಕೊಂಡು "ಕಣ್ಣುಗಳಿಂದಲೇ ನಾನು ನೋಡುವೆ......" ಅಥವಾ ಸಾಮರ್ಥ್ಯಕ್ಕೆ ಹೊಂದಬಹುದಾದ ಯಾವುದಾದರೊಂದು ಅಭಿನಯ ಗೀತೆಯನ್ನು ಹೇಳಿಕೊಡುವರು. | **ಪರಿಸರ ಅಧ್ಯಯನ**<br>**ಅಭ್ಯಾಸ – ಆರೋಗ್ಯ** | * ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಸ್ವಚ್ಛತೆಯ ಅವಶ್ಯಕತೆಯನ್ನು ತಿಳಿಯುವರು. | | | |
| | 50 ನಿ | | | ಮಕ್ಕಳ ಪಠ್ಯಪುಸ್ತಕ | ಶಿಕ್ಷಕ | * ತರಗತಿಯ ಸ್ವಚ್ಛತೆಯ ಬಗ್ಗೆ ತಿಳಿಸಿಕೊಡುವರು.<br>* ಮಕ್ಕಳಿಂದ ತರಗತಿಯನ್ನು ಓರಣ ಮಾಡಿಸುವರು.<br>i) ಅಭ್ಯಾಸ ಮಾಡುವಾಗ ಮಕ್ಕಳು ಕುಳಿತುಕೊಳ್ಳುವ ಕ್ರಮ.<br>ii) ಚಟುವಟಿಕೆಗಳನ್ನು ಮಾಡುವಾಗ ಕುಳಿತುಕೊಳ್ಳುವ ಕ್ರಮ.<br>iii) ಚಟುವಟಿಕೆಗಳಿಗೆ ಸಾಮಗ್ರಿಗಳನ್ನು ಬಳಸಿದ ನಂತರ ಹೇಗೆ ಓರಣವಾಗಿಡಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ನೀಡುವರು.<br>* ಪುಸ್ತಕಗಳನ್ನು ಹಾಗೂ ಬ್ಯಾಗ್‌ಗಳನ್ನು ಓರಣವಾಗಿ ಇಟ್ಟುಕೊಳ್ಳುವ ಅಭ್ಯಾಸಗಳು<br>i) ಮನೆಯಲ್ಲಿ ಹಾಗೂ ಶಾಲೆಯಲ್ಲಿ ಅಭ್ಯಾಸದ ನಂತರ ಪುಸ್ತಕಗಳನ್ನು ಹೇಗೆ ಜೋಡಿಸಿಕೊಳ್ಳಬೇಕು.<br>ii) ಬ್ಯಾಗ್‌ಗಳನ್ನು ಹೇಗೆ ಓರಣವಾಗಿಡಬೇಕು. ಎಂಬುದನ್ನು ಕಲಿಸುವರು.<br>* ಅನುಪಯುಕ್ತ ಕಸವನ್ನು ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡುವ ಅಭ್ಯಾಸಗಳನ್ನು ಮಾಡಿಸುವರು. | | | | | ಎರಡೂ ತರಗತಿಯ ಸಾಮರ್ಥ್ಯಗಳಲ್ಲಿ ಸಾಮ್ಯತೆ ಇರುವುದರಿಂದ ಎರಡನೇ ತರಗತಿಯ ಮಕ್ಕಳು ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ತೊಡಗುವರು. |
| | 10 ನಿ | | | | | ಎರಡನೇ ತರಗತಿಯ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯ ಪುಸ್ತಕ | ಶಿಕ್ಷಕ | * ಪಠ್ಯಪುಸ್ತಕದಲ್ಲಿನ ಪುಟ–40ರ "ಸ್ವಚ್ಛತೆಯಿಂದ ಉತ್ತಮ ಆರೋಗ್ಯ"ಕ್ಕೆ ಸಂಬಂಧಿಸಿದ ಅಂಶಗಳನ್ನು ಹೇಳಿಕೊಟ್ಟು ಹೇಳಿಸುವರು. |
| | 10 ನಿ | | | | ಶಿಕ್ಷಕ | ಪಠ್ಯಪುಸ್ತಕದ ಪುಟಸಂಖ್ಯೆ – 36ರ "ಹೀಗೆ ಮಾಡು" ಅಭ್ಯಾಸಗಳನ್ನು ಹೇಳಿಕೊಟ್ಟು ಹೇಳಿಸುವರು.<br>* ಈ ಅಂಶಗಳನ್ನು ಪ್ರತಿದಿನವೂ ಕಡ್ಡಾಯವಾಗಿ ಅನುಸರಿಸಲು ಮಾರ್ಗದರ್ಶನ ಮಾಡುವರು. | | | | | * ಒಂದನೇ ತರಗತಿಯ ಚಟುವಟಿಕೆಗಳಲ್ಲಿ ತೊಡಗುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 40 ನಿ | ಜೀವನ ವಿಜ್ಞಾನ ದೈ.ಶಿ. | ಸರಳ ವ್ಯಾಯಾಮದ ಅಭ್ಯಾಸ ಮಾಡಿಸುವುದು | ಅಗತ್ಯ ವ್ಯಾಯಾಮ ಸಾಧನಗಳು | ಶಿಕ್ಷಕ | ಮೊದಲ 40 ನಿಮಿಷಗಳು ಸಾಮೂಹಿಕ ಕವಾಯಿತು. ಎರಡೂ ತರಗತಿಗಳಿಗೂ ಮಾಡಿಸುವರು. | | | | | |
| 2<br>**KAN 59½** | 10 ನಿ | ಕನ್ನಡ<br>ಕಣ್ಣುಮುಚ್ಚಾಲೆ ಆಟ | * ಸರಳ ವಾಕ್ಯಗಳನ್ನು ಸರಿಯಾಗಿ ಪುನರುಚ್ಚರಿಸುವುದು. ಆಲಿಸಿದ ನಂತರ ಯಾರು ? ಯಾವಾಗ ? ಮತ್ತು ಎಲ್ಲಿ ? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವರು. | ಅಭಿನಯ ಗೀತೆ | ಶಿಕ್ಷಕ | **ಕಲಿಕೆಯ ಹಂತ :**<br>ಎರಡೂ ತರಗತಿಯ ಮಕ್ಕಳನ್ನು ಒಟ್ಟಾಗಿ ಕೂರಿಸಿಕೊಂಡು ಈ ಕೆಳಗಿನ ಗೀತೆಯನ್ನು ಹೇಳಿಕೊಡುವುದು.<br>"ಕಾಗೆ ಕಾಗೆ ಕವ್ವಾ<br>ಯಾರು ಬತ್ತಾರವ್ವಾ<br>---------------<br>---------------<br>ಬೀಸೋಕಲ್ಲಿನ ಗೂಟ." | ಕನ್ನಡ<br>ನಾಯಿ ಬಾಲ ಜಗ್ಗಿದ | * ಪ್ರಾಸಗಳು, ಪದ್ಯಗಳು, ಹಡುಗು ಮತ್ತು ಕಥೆಗಳನ್ನು ಗಟ್ಟಿಯಾಗಿ ಓದುವುದು. | ಅಭಿನಯ ಗೀತೆ | ಶಿಕ್ಷಕ | * ಒಂದನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | ಪಠ್ಯಪುಸ್ತಕ | ಶಿಕ್ಷಕ | * ಪಠ್ಯಪುಸ್ತಕದಲ್ಲಿನ ಕಣ್ಣು ಮುಚ್ಚಾಲೆ ಪಾಠವನ್ನು ಹೇಳಿಕೊಟ್ಟು ಹೇಳಿಸುವುದು.<br>* ಪಾಠಕ್ಕೆ ಸಂಬಂಧಿಸಿದ ಸರಳ ಪ್ರಶ್ನೆಗಳಿಗೆ ಉತ್ತರ ಪಡೆಯುವರು. | | | | ಶಿಕ್ಷಕ | ಪಠ್ಯಪುಸ್ತಕ 13ನ್ನು ತೆರೆಯಲು ಸೂಚಿಸುವುದು. ಹಾಗೂ ಪದ್ಯವನ್ನು ಹೇಳಿಕೊಳ್ಳುವಂತೆ ತಿಳಿಸುವುದು |
| | 05 ನಿ | | | | ಶಿಕ್ಷಕ | ಹಂತ 3–4ರ ಅಕ್ಷರಗಳನ್ನು ನೋಟ್ ಪುಸ್ತಕದಲ್ಲಿ ನಕಲು ಮಾಡುವಂತೆ ತಿಳಿಸುವುದು. | | | ಪಠ್ಯ ಪುಸ್ತಕ | ಶಿಕ್ಷಕ | * ಹಿಂದೆ ಕಲಿಸಲಾದ "ನಮ್ಮ ಪುಟ್ಟ ಹಾಗೂ ನಮ್ಮ ಮನೆ" ಪದ್ಯಗಳನ್ನು ಅಭಿನಯದೊಂದಿಗೆ ಸಾಮೂಹಿಕವಾಗಿ ಹಾಡಿಸುವುದು.<br>* ನಂತರ ನಮ್ಮ ಹಳ್ಳಿಯಲ್ಲಿ ಕವನವನ್ನು ಸೂಕ್ತ ಅಭಿನಯದೊಂದಿಗೆ ಕಲಿಸುವುದು.<br>* ಮೇಲಿನ ಪದ್ಯಕ್ಕೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳುವುದು. |
| | 30 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | | |
| | 05 ನಿ | | | ನೋಟ್ ಪುಸ್ತಕ | ಶಿಕ್ಷಕ | ಮೇಲಿನ ಹಂತದ ಅಕ್ಷರಗಳನ್ನು ಮತ್ತೊಮ್ಮೆ ಮನೆಯಲ್ಲಿ ಮಾಡಿಕೊಂಡು ಬರುವಂತೆ ತಿಳಿಸುವರು. | | | | ಶಿಕ್ಷಕ | ಮುಂದಿನ ತರಗತಿಗೆ ಅಗತ್ಯ ಗೃಹ ಪಾಠವನ್ನು ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ನಿಮಿಷ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ / ಕಲಿಕಾಂಶ | ಕಲಿಕಾ ಸಾಮರ್ಥ್ಯ | ಕಲಿಕೋಪಕರಣ / ಸಂಪನ್ಮೂಲಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ವಿಷಯ / ಕಲಿಕಾಂಶ | ಕಲಿಕಾ ಸಾಮರ್ಥ್ಯ | ಕಲಿಕೋಪಕರಣ / ಸಂಪನ್ಮೂಲಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 80 ನಿ | ಸಾ.ಉ.ಉ. ಕಾರ್ಯ ಫೋನ್ ತಯಾರಿಕೆ | * ಬೆಂಕಿ ಪೆಟ್ಟಿಗೆಯಿಂದ ಫೋನ್ ತಯಾರಿಸುವುದನ್ನು ಕಲಿಯುವರು | ಹಳೆಯ ಬೆಂಕಿ ಪೆಟ್ಟಿಗೆಗಳು<br>ದಾರ,<br>ಕಡ್ಡಿ, | ಶಿಕ್ಷಕರು | ಹಳೆಯ ಬೆಂಕಿ ಪೆಟ್ಟಿಗೆಗಳ ಒಳಗಿನ ಡಬ್ಬಿಯನ್ನು ತೆಗೆದುಕೊಂಡು ಅದರ ಮಧ್ಯದಲ್ಲಿ ಒಂದು ರಂಧ್ರವನ್ನು ಮಾಡಿ ರಂಧ್ರಕ್ಕೆ ಒಂದು ದಾರವನ್ನು ಸೇರಿಸಿ ಕಟ್ಟುವುದು. ದಾರದ ಇನ್ನೊಂದು ತುದಿಗೆ ಇನ್ನೊಂದು ಡಬ್ಬಿಯನ್ನು ಸೇರಿಸಿ ಕಟ್ಟುವುದು ಈಗ ದಾರದ ಫೋನ್ ತಯಾರಾಗುತ್ತದೆ. ಇದನ್ನು ಮಕ್ಕಳಿಗೆ ತೋರಿಸಿ ಇದೇ ರೀತಿಯಾಗಿ ಇಬ್ಬರು ಮಕ್ಕಳು ಸೇರಿ ಒಂದೊಂದು ಫೋನ್ ತಯಾರಿಸಿ ಅದರಲ್ಲಿ ಮಾತನಾಡಿ ಆನಂದಿಸುವಂತೆ ತಿಳಿಸುವರು.<br>ಶಿಕ್ಷಕರು ಮಾಡಿ ತೋರಿಸಿದಂತೆ ಮಕ್ಕಳು ಫೋನ್ ತಯಾರಿಸುವರು. | | | | | ಒಂದನೇ ತರಗತಿಯ ಮಕ್ಕಳ ಜೊತೆಯಲ್ಲಿ ಸೇರಿಕೊಂಡು ಅದೇ ಚಟುವಟಿಕೆಯನ್ನು ಮಾಡುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KAN<br>60½ | 10 ನಿ | ಕನ್ನಡ<br>ಕಣ್ಣುಮುಚ್ಚಾಲೆ ಆಟ | * ಸರಳ ವಾಕ್ಯಗಳನ್ನು ಸರಿಯಾಗಿ ಪುನರುಚ್ಚರಿಸುವುದು. ಆಲಿಸಿದ ನಂತರ ಯಾರು ? ಯಾವಾಗ ? ಮತ್ತು ಎಲ್ಲಿ ? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವರು. | | ಶಿಕ್ಷಕ | ಹಿಂದಿನ ಅವಧಿಯಲ್ಲಿನ ಗೃಹಪಾಠವನ್ನು ಪರಿಶೀಲಿಸುವರು. | ಕನ್ನಡ<br>ನಾಯಿ ಬಾಲ ಜಗ್ಗಿದ | * ಪ್ರಾಸಗಳು ಪದ್ಯಗಳು, ಹಾಡುಗಳು ಮತ್ತು ಕಥೆಗಳನ್ನು ಗಟ್ಟಿಯಾಗಿ ಓದುವುದು. | | ಶಿಕ್ಷಕ | ಹಿಂದಿನ ತರಗತಿಯ ಗೃಹಪಾಠವನ್ನು ಪರಿಶೀಲಿಸುವರು. |
| | 30 ನಿ | | | ಪಠ್ಯಪುಸ್ತಕ | ಶಿಕ್ಷಕ | * ಕಣ್ಣಾಮುಚ್ಚೇ ಕಾಡೇಗೂಡೆ.......................................... ............................................ ಈ ಹಾಡನ್ನು ಹೇಳಿಕೊಟ್ಟು ಹೇಳಿಸಿ ಅಭ್ಯಾಸ ಮಾಡಿಸುವರು.<br>* ಕಣ್ಣಾಮುಚ್ಚಾಲೆ ಆಟ ಆಡಿಸುವದು.<br>* ಮಕ್ಕಳು ಆಡಿದ ಆಟಕ್ಕೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. | | | | ಸ್ವಕಲಿಕೆ | ಈ ಹಿಂದೆ ಹೇಳಲಾದ ಪದ್ಯಗಳನ್ನು ಹಾಡಿಕೊಳ್ಳಲು ಸೂಚಿಸುವರು.<br>ಮೇಲೆ ಹೇಳಲಾದ ಪದ್ಯಗಳನ್ನು ಸ್ವತಃ ಹೇಳಿಕೊಳ್ಳುವರು. |
| | 05 ನಿ | | | | ಶಿಕ್ಷಕ | ಹಂತ – 3 –4ರ ಅಕ್ಷರಗಳನ್ನು ವಾಲ್‌ಸ್ಲೇಟಿನಲ್ಲಿ ಬರೆಯುವಂತೆ ಹೇಳುವರು. | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸುವರು. |
| | 30 ನಿ | | | ವಾಲ್‌ಸ್ಲೇಟ್ | ಸ್ವಕಲಿಕೆ | ಮಕ್ಕಳು ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯ ಪುಸ್ತಕ<br>ಅಭಿನಯ ಗೀತೆ | | * ಪದ್ಯವನ್ನು ಸಾಮೂಹಿಕವಾಗಿ ಅಭಿನಯದೊಂದಿಗೆ ಹಾಡುವರು.<br>* ಪಠ್ಯಪುಸ್ತಕದ 'ನಾನು ಯಾರು' ಪದ್ಯ ಭಾಗವನ್ನು ಅಭಿನಯದೊಂದಿಗೆ ಹೇಳಿಕೊಟ್ಟು ಹಾಡಿಸುವರು. ಸಾಮೂಹಿಕವಾಗಿ ಅಭ್ಯಾಸ ಮಾಡಿಸುವರು.<br>ಮೇಲಿನ ಪದ್ಯಭಾಗಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಅಗತ್ಯ ಗೃಹಪಾಠ ನೀಡುವರು. | | | | ಶಿಕ್ಷಕ | ಅಗತ್ಯ ಗೃಹಪಾಠ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 10 ನಿ | ಗಣಿತ<br>ಸಂಕಲನ | * ಮೊತ್ತ 9ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತುಗಳನ್ನು ಬಳಸಿ ಸಂಕಲನ ಮಾಡುವುದು.<br>* "+" ಸಂಕಲನದ ಚಿಹ್ನೆ ಮತ್ತು ಸಮಚಿಹ್ನೆ '=' ಪರಿಚಯ, ಅಭ್ಯಾಸ ಮತ್ತು ಬಳಕೆ<br>* ಮೊತ್ತ 9ಕ್ಕೆ ಮೀರದಂತೆ + ಮತ್ತು = ಚಿಹ್ನೆ ಬಳಸಿ ಸಂಕಲನ. | ಸಂಕಲನ ಚಕ್ರ ಮಾದರಿ | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :**<br>ಶಿಕ್ಷಕರು ಕಪ್ಪು ಹಲಗೆಯ ಮೇಲೆ ಹಲವು ಲೆಕ್ಕಗಳನ್ನು ಹಾಕಿ ತಮ್ಮ ಪುಸ್ತಕಗಳಲ್ಲಿ ಬರೆದುಕೊಂಡು ಲೆಕ್ಕ ಬಿಡಿಸುವಂತೆ ಸೂಚನೆ ನೀಡುವರು. | ಗಣಿತ<br>ವ್ಯವಕಲನ | * ಎರಡು ಸಂಖ್ಯೆಗಳ ದಶಕ ರಹಿತ ಮತ್ತು ದಶಕ ಸಹಿತ ವ್ಯವಕಲನದ ಲೆಕ್ಕಗಳನ್ನು ಮಾಡುವುದು.<br>* ನಿತ್ಯ ಜೀವನದಲ್ಲಿ ವ್ಯವಕಲನಕ್ಕೆ ಸಂಬಂಧಿಸಿದತೆ, ಸಮಸ್ಯೆಗಳನ್ನು ಬಿಡಿಸುವುದು. | ಮಿಂಚು ಪಟ್ಟಿಗಳು | ಹಿರೇಮಣಿ | ಶಿಕ್ಷಕರು ಹಿರೇಮಣಿಗೆ ಎಲ್ಲಾ ವಿದ್ಯಾರ್ಥಿಗಳಿಗೂ 2 ಸಂಖ್ಯೆಗಳ ಮಿಂಚುಪಟ್ಟಿ ವಿತರಿಸುವಂತೆ ಹೇಳುವರು. ಹಿರೇಮಣಿ ವಿತರಿಸುವರು ( 99ಕ್ಕೆ ಮೀರದಂತೆ) |
| | 25 ನಿ | | | | ಸ್ವಕಲಿಕೆ | ಮಕ್ಕಳು ಕಪ್ಪುಹಲಗೆಯ ಮೇಲೆ ಇರುವ ಲೆಕ್ಕಗಳನ್ನು ಪುಸ್ತಕಗಳಲ್ಲಿ ಬರೆದುಕೊಂಡು ಬಿಡಿಸುವರು. | | | | ಶಿಕ್ಷಕ | ತರಗತಿಯ ಮುಂಭಾಗಕ್ಕೆ 2 ವಿದ್ಯಾರ್ಥಿಗಳನ್ನು ಕರೆಸಿ ಅವರ ಬಳಿ ಇರುವ ಸಂಖ್ಯೆಗಳನ್ನು ಬಳಸಿ 2 ಸಂಖ್ಯೆಗಳ ವ್ಯವಕಲನ ಮಾಡುವ ವಿಧಾನವನ್ನು ಮಕ್ಕಳಿಗೆ ಪರಿಚಯಿಸುವರು.<br>ಉದಾ : 48 ಬಿಡಿ : 8 – 5 = 3<br>–25 ಹತ್ತು : 4 – 2 = 2<br>ಇದೇ ಮಾದರಿಯಲ್ಲಿ ವಿದ್ಯಾರ್ಥಿಗಳಿಂದ ಹಲವು ಲೆಕ್ಕಗಳನ್ನು ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಪುಸ್ತಕಗಳನ್ನು ಪರಿಶೀಲಿಸಿ ಶಿಕ್ಷಕರು, ನಂತರ ಮಕ್ಕಳನ್ನು ಚಿಕ್ಕ–ಚಿಕ್ಕ ಗುಂಪುಗಳನ್ನಾಗಿ ಮಾಡಿ ಅವರಿಗೆ ಸಂಕಲನದ ಚಕ್ರಗಳನ್ನು ವಿತರಿಸುವರು. | | | ಪಠ್ಯಪುಸ್ತಕದ ಅಭ್ಯಾಸಗಳು | ಶಿಕ್ಷಕ | ನಂತರ ಶಿಕ್ಷಕರು ಪುಟ – 97ರಲ್ಲಿನ ಸಮಸ್ಯೆಗಳನ್ನು ಹಿರೇಮಣಿಯ ನೇತೃತ್ವದಲ್ಲಿ ಬಿಡಿಸುವಂತೆ ಮಕ್ಕಳಿಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | ಶಿಕ್ಷಕರು ಸಂಕಲನದ ಚಕ್ರ ಬಳಸಿ ಮಕ್ಕಳಿಗೆ ಮೌಲ್ಯಮಾಪನ ಚಟುವಟಿಕೆ ಮಾಡಿಸುವರು.<br><br>ಸಂಕಲನದ ಚಕ್ರ | | | | ಹಿರೇಮಣಿ | ವಿದ್ಯಾರ್ಥಿಗಳು ಹಿರೇಮಣಿಯ ನೇತೃತ್ವದಲ್ಲಿ ಪುಟ–97ರಲ್ಲಿನ 15 ಲೆಕ್ಕಗಳನ್ನು ಬಿಡಿಸುವರು. |
| | 10 ನಿ | | | | | ತಪ್ಪಾಗಿ ಜೋಡಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ಮತ್ತೊಮ್ಮೆ ವಿವಿಧ ವಸ್ತುಗಳನ್ನು ಬಳಸಿ ಸಂಕಲನ, ಮಾಡುವ ವಿಧಾನವನ್ನು ಪುನರ್ಮನನ ಮಾಡಿಸುವರು. | | | | | ವಿದ್ಯಾರ್ಥಿಗಳು ಮಾಡಿದ ಲೆಕ್ಕಗಳನ್ನು ಪರಿಶೀಲಿಸಿ, ತಪ್ಪುಗಳಿದ್ದರೆ ತಿದ್ದಿ, ಸೂಕ್ತ ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | ಜೀವನ ವಿಜ್ಞಾನ<br>ಒಳ್ಳೆಯ ಆಹಾರಾಭ್ಯಾಸ | * ಉತ್ತಮ ಆರೋಗ್ಯಕ್ಕಾಗಿ ಒಳ್ಳೆಯ ಆಹಾರಾಭ್ಯಾಸಗಳನ್ನು ರೂಢಿಸಿಕೊಳ್ಳುವರು. | | ಶಿಕ್ಷಕ | ಮಕ್ಕಳನ್ನು ವೃತ್ತಾಕಾರವಾಗಿ (ಎರಡೂ ತರಗತಿ) ಕೂರಿಸಿಕೊಂಡು ಪೂರ್ವಭಾವಿಯಾಗಿ ಮಕ್ಕಳು ಪ್ರತಿನಿತ್ಯ ಸೇವಿಸುವ ಆಹಾರಗಳ ಬಗೆಗಳನ್ನು ಕೇಳುವುದರ ಮೂಲಕ ಹಿಮ್ಮಾಹಿತಿ ಪಡೆಯುವರು. | | | | | 1ನೇ ತರಗತಿಯಲ್ಲಿರುವ ಚಟುವಟಿಕೆ ಮುಂದುವರೆಸುವುದು. |
| | 30 ನಿ | | | ಚಿತ್ರ ಪಟಗಳು | ಶಿಕ್ಷಕ | * ಒಂದು ಮತ್ತು ಎರಡನೇ ತರಗತಿಯ ಮಕ್ಕಳಿಗೆ ಕೆಲವು ಚಿತ್ರಪಟಗಳನ್ನು ನೀಡಿ ಅವರಿಗೆ ಅವರಲ್ಲಿರುವ ಅಂಶಗಳನ್ನು ಪಟ್ಟಿ ಮಾಡಿಸುವರು.<br>ಉದಾಹರಣೆಗೆ :<br>* ಊಟ ಮಾಡುವಾಗ ವಿನಾಕಾರಣ ಮಾತನಾಡುತ್ತಿರುವುದು.<br>* ಊಟ ಮಾಡುವಾಗ ಬೇಸರದಿಂದಿರುವುದು.<br>* ಊಟ ಮಾಡುವಾಗ ಜಗಳ ವಾಡುತ್ತಿರುವುದು ಇತ್ಯಾದಿ. | | | | | |
| | 40 ನಿ | | | | | – ಮೇಲಿನ ನಿದರ್ಶನಗಳನ್ನು ಪಟ್ಟಿ ಮಾಡಿಸಿದ ನಂತರ ವಿವರಣಾತ್ಮಕವಾಗಿ ಉತ್ತಮ ಆಹಾರ ಅಭ್ಯಾಸಗಳಿಗಾಗಿ ಕೆಲವು ನಿಯಮಗಳನ್ನು ರೂಢಿಸಿಕೊಳ್ಳುವಂತೆ ಮನದಟ್ಟು ಮಾಡಿಸುವರು.<br>– ಊಟ ಮಾಡುವ ಮುನ್ನ ಸ್ವಚ್ಛವಾಗಿ ಕೈ, ಕಾಲು, ತೊಳೆದುಕೊಳ್ಳಬೇಕು.<br>– ಊಟ ಮಾಡುವಾಗ ಹಸನ್ಮುಖಿಗಳಾಗಿ ಹೆಚ್ಚು ಮಾತನಾಡದೆ ಊಟ ಮಾಡಬೇಕು. ಹಳಸಿದ ಆಹಾರ ಪದಾರ್ಥಗಳನ್ನು ತಿನ್ನಬಾರದು. ಅತಿ ಬಿಸಿಯಾದ ಆಹಾರ ತಿನ್ನಬಾರದು. ಹಣ್ಣುಗಳನ್ನು ಉಪಯೋಗಿಸುವ ಮುನ್ನ ತೊಳೆದು ತಿನ್ನಬೇಕು.<br>ಊಟದ ನಂತರ ಹೆಚ್ಚು ನೀರು ಕುಡಿಯಬೇಕು. ಮುಂತಾದ ವಿವರಣಾತ್ಮಕ ವಿಚಾರಗಳನ್ನು ತಿಳಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
